ದೊಡ್ಡಬಳ್ಳಾಪುರ ತಾಲ್ಲೂಕು ಗುಂಡ್ಲಹಳ್ಳಿ ಬಳಿಯ ಮೆ॥ ಟೆರ್ರಾಫರ್ಮ್ ಬಯೋಟೆಕ್ನಾಲಜೀಸ್ ಪ್ರೈವೇಟ್ ಲಿಮಿಟೆಡ್ ಸಂಸ್ಥೆಯ ಘಟಕದಲ್ಲೂ ಸಹ ಸ್ಥಳೀಯರ ಪ್ರತಿಭಟನೆಯಿಂದಾಗಿ ತ್ಯಾಜ್ಯ ವಿಲೇವಾರಿಯನ್ನು ನಿಲ್ಲಿಸಲಾಗಿತ್ತು. ಆದರೆ ಇತ್ತೀಚೆಗೆ ಕಳೆದ ಒಂದು ತಿಂಗಳಿನಿಂದ ಸದರಿ ಘಟಕದಲ್ಲಿ ಪ್ರತಿದಿನ ಸುಮಾರು 200-250 ಮೆ.ಟನ್ ಘನತ್ಯಾಜ್ಯವನ್ನು ಹಾಗೂ ಉಳಿಕೆ ತ್ಯಾಜ್ಯವನ್ನು ಮಂಡೂರು (ಉತ್ತರ), ಮಂಡೂರು (ದಕ್ಷಿಣ) ಘಟಕಗಳಲ್ಲಿ ವಿಲೇವಾರಿ ಮಾಡಲಾಗುತ್ತಿದ್ದು, ಈ ಘಟಕಗಳ ಮೇಲೆ ಒತ್ತಡ ಹೆಚ್ಚಾಗಿದ್ದು, ಬೆಂಗಳೂರು ನಗರದ ತ್ಯಾಜ್ಯ ವಿಲೇವಾರಿಯಲ್ಲಿ ವ್ಯತ್ಯಯ್ಯ ಉಂಟಾಗಿದ್ದು, ಈ ಬಗ್ಗೆ ಶ್ರೀ.ಜಿ.ಆರ್.ಮೋಹನ್, ವಕೀಲರು ಎಂಬುವರು WP No.30450/2012 ರಲ್ಲಿ ಉಚ್ಛ ನ್ಯಾಯಾಲಯದಲ್ಲಿ ದಾವೆ ಹೂಡಿರುತ್ತಾರೆ.

S. Venkatesh Babu

ಅಧ್ಯಕ್ಷರು
ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಬೆಂಗಳೂರು

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಘನತ್ಯಾಜ್ಯ ವಿಲೇವಾರಿ ಸಮಸ್ಯೆಯನ್ನು ಬಗೆಹರಿಸುವ ನಿಟ್ಟಿನಲ್ಲಿ, ಬೆಂಗಳೂರು ನಗರ ಜಿಲ್ಲೆ, ಆನೇಕಲ್ ತಾಲ್ಲೂಕು, ಸರ್ಜಾಪುರ ಹೋಬಳಿ, ಚಿಕ್ಕನಾಗಮಂಗಲ ಗ್ರಾಮದ ಸರ್ವೆ ನಂ.31 ರ 94-35 (ಎಕರೆ-ಗುಂಟೆ) ಜಾಗವನ್ನು ಘನತ್ಯಾಜ್ಯ ವಿಲೇವಾರಿ ಘಟಕ ಸ್ಥಾಪನೆಗಾಗಿ ಕರ್ನಾಟಕ ರಾಜ್ಯ ಸರ್ಕಾರವು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಗೆ ಒದಗಿಸಿರುತ್ತದೆ.

ಈ ಹಿನ್ನೆಲೆಯಲ್ಲಿ ಸದರಿ ಚಿಕ್ಕನಾಗಮಂಗಲ ಗ್ರಾಮದ ಸರ್ವೆ ನಂ.31 ರ ಜಾಗವನ್ನು ಮೋಜಣಿದಾರರು ಅಳತೆ ಮಾಡಿ ನಕಾಶೆ ನೀಡಲಾಗಿದ್ದು, ಸ್ಥಳದಲ್ಲಿ 31-21 (ಎಕರೆ-ಗುಂಟೆ) ಪ್ರದೇಶ ಲಭ್ಯವಿರುವುದಾಗಿ ವರದಿ ನೀಡಿರುತ್ತಾರೆ. ಈ ಜಾಗವನ್ನು ದಿನಾಂಕ: 29-11-2012 ರಂದು ತಹಸಿಲ್ದಾರ್ ಆನೇಕಲ್ ತಾಲ್ಲೂಕು ರವರು ಪಾಲಿಕೆ ಹಸ್ತಾಂತರಿಸಿರುತ್ತಾರೆ.

ಗೌರವಾನ್ವಿತ ಉಚ್ಛನ್ಯಾಯಾಲಯದ ನಿರ್ದೇಶನದಂತೆ ಸದರಿ ಚಿಕ್ಕನಾಗಮಂಗಲ ಸರ್ವೆ ನಂ.31 ರಲ್ಲಿ ಹಸಿ ತ್ಯಾಜ್ಯ ಸಂಸ್ಕರಣಾ ಘಟಕವನ್ನು ಸ್ಥಾಪಿಸಲು ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯನ್ನು ಕೋರಲಾಗಿ, ಮಂಡಳಿಯು ದಿನಾಂಕ: 29-11-2012 ರಲ್ಲಿ ಹಲವು ಷರತ್ತುಗಳನ್ನು ವಿಧಿಸಿ, ಸದರಿ ಜಾಗದಲ್ಲಿ ಹಸಿ ತ್ಯಾಜ್ಯ ಸಂಸ್ಕರಣಾ ಘಟಕವನ್ನು ಸ್ಥಾಪಿಸಿ ದಿನಾಂಕ: 31-12-2013 ರವರೆಗೆ ನಿರ್ವಹಿಸಲು ಅನುಮತಿ ನೀಡಿರುತ್ತದೆ.

ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯ ನಿರ್ದೇಶನದಂತೆ, ಸದರಿ ಜಾಗಕ್ಕೆ ಕೂಡು ರಸ್ತೆ, ಜಾಗದ ಸುತ್ತಲ್ಲೂ ಕಾಂಪೌಂಡ್ ಗೋಡೆ, ಕಾಂಕ್ರೀಟ್ ಪ್ಲಾಟ್‌ಫಾರಂ ಮುಂತಾದವುಗಳನ್ನು ಶೀಘ್ರವಾಗಿ ಕೈಗೊಳ್ಳಬೇಕಾಗಿದ್ದು, ಈ ಕಾಮಗಾರಿಗಳನ್ನು ಟೆಂಡರ್ ಕರೆದು ನಿರ್ವಹಿಸುವಲ್ಲಿ ವಿಳಂಬವಾಗುವುದರಿಂದ, ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿ ಹಾಗೂ ಪಾಲಿಕೆಯ ಕೌನ್ಸಿಲ್‌ನ ಅನುಮೋದನೆ ನಿರೀಕ್ಷಿಸಿ ಈ ಕಾಮಗಾರಿಯನ್ನು ಮೆ॥ ಕೆ.ಆರ್.ಐ.ಡಿ.ಎಲ್. ಸಂಸ್ಥೆ ಮುಖಾಂತರ ಕೈಗೊಳ್ಳಲಾಗಿರುತ್ತದೆ.

ಮೇಲಿನ ಹಿನ್ನೆಲೆಯಲ್ಲಿ ಈ ಕೆಳಗಿನಂತೆ ಅನುಮೋದನೆ ಕೋರಿ ಟಿಪ್ಪಣಿಯನ್ನು ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿಯ ಮುಂದೆ ಹಾಗೂ ಪಾಲಿಕೆ ಕೌನ್ಸಿಲ್ ಸಭೆ ಮುಂದೆ ಮಂಡಿಸಲಾಗಿದೆ.

1. ಬೆಂಗಳೂರು ಜಿಲ್ಲೆ, ಆನೇಕಲ್ ತಾಲ್ಲೂಕು, ಸರ್ಜಾಪುರ ಹೋಬಳಿ, ಚಿಕ್ಕನಾಗಮಂಗಲ ಗ್ರಾಮದ ಸರ್ವೆ ನಂ.31 ರ 31-21 (ಎಕರೆ-ಗುಂಟೆ) ಪಾಲಿಕೆ ಜಾಗದಲ್ಲಿ ಹಸಿ ತ್ಯಾಜ್ಯ ಸಂಸ್ಕರಣಾ ಘಟಕವನ್ನು ಸ್ಥಾಪಿಸಲು ಆಡಳಿತಾತ್ಮಕ ಅನುಮೋದನೆ.
2. ಬೆಂಗಳೂರು ಮಹಾನಗರದ ಘನತ್ಯಾಜ್ಯ ವಿಲೇವಾರಿಗೆ ಅನುವಾಗುವಂತೆ, ತುರ್ತಿನ ಹಿನ್ನೆಲೆಯಲ್ಲಿ, ಈ ಕಾಮಗಾರಿಯನ್ನು ಮೆ॥ ಕೆ.ಆರ್.ಐ.ಡಿ.ಎಲ್. ಸಂಸ್ಥೆಗೆ ವಹಿಸಿರುವ ಕ್ರಮಕ್ಕೆ ಅನುಮೋದನೆ.
3. ಸದರಿ ಸರ್ವೆ ನಂ.31 ರ 31-21 (ಎಕರೆ-ಗುಂಟೆ) ಪಾಲಿಕೆ ಜಾಗದಲ್ಲಿ ಹಸಿತ್ಯಾಜ್ಯ ಸಂಸ್ಕರಣಾ ಘಟಕವನ್ನು ಶೀಘ್ರವಾಗಿ ನಿರ್ಮಿಸಲು ಮೆ॥ ಕೆ.ಆರ್.ಐ.ಡಿ.ಎಲ್. ಸಂಸ್ಥೆಗೆ ರೂ.100.00 ಲಕ್ಷಗಳ ಮುಂಗಡ ಹಣ ಪಾವತಿಸಲು ಅನುಮೋದನೆ.

ಕೋರಿ ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿ ಮುಂದೆ ಮಂಡಿಸಲಾಗಿರುವ ಟಿಪ್ಪಣಿ.

**<u>ನಿರ್ಣಯ:</u>**

**ಆಯುಕ್ತರು ದಿನಾಂಕ: 27-12-2012ರ ಟಿಪ್ಪಣಿಯಲ್ಲಿ ಪ್ರಸ್ತಾವನೆಯ ಬಗ್ಗೆ ಚರ್ಚಿಸಲಾಯಿತು. ಚಿಕ್ಕನಾಗಮಂಗಲ ಗ್ರಾಮದ ಸರ್ವೆ ನಂ.31 ರಲ್ಲಿನ ಸ್ಥಳದಲ್ಲಿ ಯಾವುದೇ ಕಾಮಗಾರಿಯನ್ನು ಕೈಗೊಂಡಿರುವುದಿಲ್ಲವೆಂದು ಸಂಬಂಧಪಟ್ಟ ಅಧಿಕಾರಿಗಳು ತಿಳಿಸಿರುವ ಹಿನ್ನೆಲೆಯಲ್ಲಿ ಪರಿಶೀಲಿಸಿ ಮರು ಮಂಡಿಸಲು ಕಡತವನ್ನು ಹಿಂದಿರುಗಿಸಲಾಗಿದೆ.**

S. Venkatesh Babu
ಅಧ್ಯಕ್ಷರು
ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಬೆಂಗಳೂರು

**12. ವಿಷಯದ ಸಂಖ್ಯೆ: ಸಾಆಸ್ಥಾಸ/77/2012-13:**

ಸಂಖ್ಯೆ: ಆ/ಪಿಎಸ್‌ಆರ್(ಜಿ)/2169/2012-13, ದಿನಾಂಕ: 29-12-2012 ರ ಆಯುಕ್ತರು ರವರ ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ಉತ್ಪತ್ತಿಯಾಗುವ ಘನತ್ಯಾಜ್ಯದ ಪೈಕಿ ಪ್ರತಿದಿನ 600 ಮೆಟ್ರಿಕ್ ಘನತ್ಯಾಜ್ಯವನ್ನು ಸಂಸ್ಕರಿಸುವ ಘಟಕ ಸ್ಥಾಪಿಸಲು ಪಾಲಿಕೆಯು ಮೆ॥ ರಾಮ್ಕೀ ಎನರ್ಜಿ ಅಂಡ್ ಎನವಿರಾನ್‌ಮೆಂಟ್ ಲಿಮಿಟೆಡ್ ಸಂಸ್ಥೆಯೊಂದಿಗೆ ದಿನಾಂಕ: 11-08-2004 ರಲ್ಲಿ ಒಪ್ಪಂದ ಮಾಡಿಕೊಂಡಿರುತ್ತದೆ. ಕರಾರಿನಂತೆ ಸದರಿ ಸಂಸ್ಥೆಗೆ ಪಾಲಿಕೆಯು 100 ಎಕರೆ ಜಾಗವನ್ನು 20 ವರ್ಷಗಳ ಅವಧಿಗೆ ಲೀಸ್ ಆಧಾರದ ಮೇಲೆ ವಹಿಸಿ ಕೊಡಬೇಕಾಗಿತ್ತು ಹಾಗೂ ಪ್ರತಿದಿನ 600 ಮೆಟ್ರಿಕ್ ಘನತ್ಯಾಜ್ಯವನ್ನು ಘಟಕಕ್ಕೆ ಒದಗಿಸಬೇಕಾಗಿತ್ತು. ಆದರೆ ಭೂ ತಗಾದೆಯಿಂದಾಗಿ ಸದರಿ ಸಂಸ್ಥೆಗೆ 46 ಎಕರೆ ಪ್ರದೇಶವನ್ನು ಒದಗಿಸಲಾಗಿದ್ದು, ಸದರಿ ಜಾಗದಲ್ಲಿ ಮೆ॥ ರಾಮ್ಕೀ ಎನರ್ಜಿ ಅಂಡ್ ಎನವಿರಾನ್‌ಮೆಂಟ್ ಲಿಮಿಟೆಡ್ ಸಂಸ್ಥೆಯು ಘನತ್ಯಾಜ್ಯದಿಂದ ಗೊಬ್ಬರ ತಯಾರಿಸುವ ಘಟಕವನ್ನು ಇತರೆ ಸೌಲಭ್ಯಗಳಾದ ಕಾಂಕ್ರೀಟ್ ಪ್ಲಾಟ್‌ಫಾರಂ, Site Office, Presortor, LTP ಮುಂತಾದ ಸೌಲಭ್ಯಗೊಂದಿಗೆ ಸ್ಥಾಪಿಸಿ ದಿನಾಂಕ: 29-01-2007 ರಿಂದ ಕಾರ್ಯಾರಂಭ ಮಾಡಿರುತ್ತದೆ.

ಸದರಿ ಸಂಸ್ಥೆಗೆ ಒದಗಿಸುತ್ತಿದ್ದ ಘನತ್ಯಾಜ್ಯವನ್ನು ಸಮರ್ಪಕವಾಗಿ ಎಂ.ಎಸ್.ಡಬ್ಲ್ಯೂ. ನಿಯಮಾವಳಿ 2000 ರಂತೆ ನಿರ್ವಹಿಸುತ್ತಿಲ್ಲವೆಂದು ತಿಳಿಸಿ, ಸದರಿ ಘಟಕದಲ್ಲಿ ಘನತ್ಯಾಜ್ಯ ವಿಲೇವಾರಿಯನ್ನು ನಿಲ್ಲಿಸುವಂತೆ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯು ದಿನಾಂಕ: 11-07-2012 ರಲ್ಲಿ ಪತ್ರ ನೀಡಿದ್ದರ ಮೇರೆಗೆ, ಸದರಿ ಮಾವಳ್ಳಿಪುರ ಘಟಕದಲ್ಲಿ ದಿನಾಂಕ: 12-07-2012 ರಿಂದ ತ್ಯಾಜ್ಯ ವಿಲೇವಾರಿಯನ್ನು ನಿಲ್ಲಿಸಲಾಗಿರುತ್ತದೆ.

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ಉತ್ಪತ್ತಿಯಾಗುತ್ತಿರುವ ಸುಮಾರು 3500 ರಿಂದ 4000 ಮೆ.ಟನ್ ಘನತ್ಯಾಜ್ಯವನ್ನು ಈ ಹಿಂದೆ (1) ಮಂಡೂರು (ಉತ್ತರ), (2) ಮಂಡೂರು (ದಕ್ಷಿಣ), (3) ಮಾವಳ್ಳಿಪುರ, (4) ಮೆ॥ಟೆರ್ರಾಫರ್ಮಾ, (5) ಚೀಮಸಂದ್ರ, (6) ಅಂಜನಾಪುರ ಕಲ್ಲುಗಣಿ ಹಾಗೂ (7) ಸುಬ್ಬರಾಯನಪಾಳ್ಯ ಘಟಕಗಳಲ್ಲಿ ವಿಲೇವಾರಿ ಮಾಡಲಾಗುತ್ತಿತ್ತು.

(3) ಚೀಮಸಂದ್ರ ಮತ್ತು (4) ಅಂಜನಾಪುರ ಕಲ್ಲುಗಣಿ ಘಟಕಗಳು ತುಂಬಿರುವ ಹಿನ್ನೆಲೆಯಲ್ಲಿ ಹಾಗೂ ಸ್ಥಳೀಯರ ಪ್ರತಿಭಟನೆ ಮತ್ತು ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯ ನಿರ್ದೇಶನದಂತೆ (1) ಮಾವಳ್ಳಿಪುರ, (4) ಮೆ॥ಟೆರ್ರಾಫರ್ಮಾ ಮತ್ತು (5) ಸುಬ್ಬರಾಯನಪಾಳ್ಯ ಘಟಕಗಳಲ್ಲಿ ಘನತ್ಯಾಜ್ಯ ವಿಲೇವಾರಿಯು ಸ್ಥಗಿತಗೊಂಡ ಹಿನ್ನೆಲೆಯಲ್ಲಿ, ಪಾಲಿಕೆಯ ಎಲ್ಲಾ ಘನತ್ಯಾಜ್ಯವನ್ನು ಮಂಡೂರು (ಉತ್ತರ) ಹಾಗೂ ಮೆ॥ ಶ್ರೀನಿವಾಸ ಗಾಯಿತ್ರಿ ರಿಸೋರ್ಸ್ ರಿಕವರಿ ಲಿಮಿಟೆಡ್ ಸಂಸ್ಥೆ ನಿರ್ವಹಿಸುತ್ತಿರುವ ಮಂಡೂರು (ದಕ್ಷಿಣ) ಘಟಕಗಳಲ್ಲಿ ವಿಲೇವಾರಿ ಮಾಡಲಾಗುತ್ತಿದೆ.

ಇದರಿಂದಾಗಿ ಬೆಂಗಳೂರು ಮಹಾನಗರ ಘನತ್ಯಾಜ್ಯ ವಿಲೇವಾರಿಯಲ್ಲಿ ವ್ಯತ್ಯಯ ಉಂಟಾಗಿ ಘನತ್ಯಾಜ್ಯ ವಿಲೇವಾರಿಯು ತೀವ್ರತರವಾದ ಸಮಸ್ಯೆ ಉದ್ಭವಿಸಿರುತ್ತದೆ. ಬೆಂಗಳೂರು ಮಹಾನಗರದ ಘನತ್ಯಾಜ್ಯ ವಿಲೇವಾರಿ ಸಮಸ್ಯೆಯಾಗಿ ಇದರಿಂದ ಸಾರ್ವಜನಿಕರ ಆರೋಗ್ಯದ ಮೇಲೆ ದುಷ್ಪರಿಣಾಮವುಂಟಾಗುತ್ತಿದೆಯೆಂದು ಹಾಗೂ ಸಮರ್ಪಕ ಘನತ್ಯಾಜ್ಯ ವಿಲೇವಾರಿಗೆ ಕ್ರಮಕೈಗೊಳ್ಳುವಂತೆ ಪಾಲಿಕೆಗೆ ನಿರ್ದೇಶನ ನೀಡಲು ಸಂಖ್ಯೆ: 24738-49/2012 ಹಾಗೂ 30450/2012 ಸಾರ್ವಜನಿಕ ಹಿತಾಸಕ್ತಿ ಅರ್ಜಿ ಸಲ್ಲಿಸಲಾಗಿರುತ್ತದೆ. ಈ ಸಂಬಂಧ ಗೌರವಾನ್ವಿತ ನ್ಯಾಯಾಲಯವು ಘನತ್ಯಾಜ್ಯವನ್ನು ಸಮರ್ಪಕವಾಗಿ ವಿಲೇವಾರಿ ಮಾಡಲು ಎಲ್ಲಾ ಅಗತ್ಯ ಕ್ರಮಗಳನ್ನು ಶೀಘ್ರವಾಗಿ ಕೈಗೊಳ್ಳಲು ಆದೇಶ ನೀಡಿರುತ್ತದೆ.

ಘನತ್ಯಾಜ್ಯ ವಿಲೇವಾರಿಯಲ್ಲಿ ವ್ಯತ್ಯಯ ಹಾಗೂ ಸಮಸ್ಯೆ ಉಂಟಾಗುವ ಪೂರ್ವದಲ್ಲಿ, ಮಂಡೂರು ಉತ್ತರ ಘಟಕಕ್ಕೆ ಪ್ರತಿ ದಿನ ಸುಮಾರು 500-600 ಮೆಟ್ರಿಕ್ ಟನ್ ಹಾಗೂ ಮಂಡೂರು ದಕ್ಷಿಣ ಘಟಕಕ್ಕೆ ಪ್ರತಿ ದಿನ ಸುಮಾರು 600-700 ಮೆಟ್ರಿಕ್ ಟನ್ ಘನತ್ಯಾಜ್ಯವನ್ನು ಸರಬರಾಜು ಮಾಡಲಾಗುತ್ತಿತ್ತು.

ಅಧ್ಯಕ್ಷರು
ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಬೆಂಗಳೂರು

ಪಾಲಿಕೆಯ ಉಳಿಕೆ ಘಟಕಗಳು ಸ್ಥಗಿತಗೊಂಡ ನಂತರ ಮಂಡೂರು ಉತ್ತರ ಹಾಗೂ ಮಂಡೂರು ದಕ್ಷಿಣ ಘಟಕಗಳಲ್ಲಿ ಪಾಲಿಕೆಯ ಎಲ್ಲಾ ಘನತ್ಯಾಜ್ಯವನ್ನು ವಿಲೇವಾರಿ ಮಾಡಲಾರಂಭಿಸಲಾಯಿತು. ಇದನ್ನು ವಿರೋಧಿಸಿ ಸ್ಥಳೀಯರು ದಿನಾಂಕ: 27-07-2012 ರಿಂದ 30-07-2012 ರವರೆಗೆ ಮಂಡೂರು ಘಟಕಗಳಲ್ಲಿ ತ್ಯಾಜ್ಯ ವಿಲೇವಾರಿಯನ್ನು ಸ್ಥಗಿತಗೊಳಿಸಿರುತ್ತಾರೆ.

ಈ ಸಂಬಂಧ ಮಾನ್ಯ ಮುಖ್ಯ ಮಂತ್ರಿಗಳು, ಆರೋಗ್ಯ ಮಂತ್ರಿಗಳು, ಪೂಜ್ಯ ಮಹಾಪೌರರು, ಪಾಲಿಕೆ ಅಧಿಕಾರಿಗಳು, ಮಂಡೂರು ಹಾಗೂ ಸುತ್ತಮುತ್ತಲಿನ ಗ್ರಾಮಸ್ಥರವರೊಡನೆ ಮುಖ್ಯ ಮಂತ್ರಿಗಳ ಗೃಹಕಛೇರಿ ಕೃಷ್ಣಾದಲ್ಲಿ ಸಭೆ ನಡೆಸಿದ ನಂತರ ಮಂಡೂರು ಘಟಕಗಳಲ್ಲಿ ಎರಡು ತಿಂಗಳ (ಆಗಸ್ಟ್ ಮತ್ತು ಸೆಪ್ಟೆಂಬರ್-2012) ರವರೆಗೆ ಮಾತ್ರ ಘನತ್ಯಾಜ್ಯ ವಿಲೇವಾರಿಗೆ ರಾತ್ರಿ 10 ಗಂಟೆಯಿಂದ ಬೆಳಿಗ್ಗೆ 6 ಗಂಟೆವರೆಗೆ ವಿಲೇವಾರಿಗೆ ಒಪ್ಪಿರುತ್ತಾರೆ.

ಸದರಿ ಮಂಡೂರು ಘಟಕಗಳಲ್ಲಿ ಒಪ್ಪಿದ ಅವಧಿಗೆ ಮೀರಿ ಮುಂದುವರೆದ ಘನತ್ಯಾಜ್ಯ ವಿಲೇವಾರಿಯನ್ನು ಸ್ಥಳೀಯರು ಪುನಃ ವಿರೋಧಿಸಿ ದಿನಾಂಕ: 18-10-2012 ರಿಂದ 21-10-2012 ರವರೆಗೆ ಮತ್ತೆ ಘಟಕವನ್ನು ಸ್ಥಗಿತಗೊಳಿಸಿರುತ್ತಾರೆ.

ಈ ಸಂಬಂಧ ದಿನಾಂಕ: 21-10-2012 ರಂದು ಆರೋಗ್ಯ ಮಂತ್ರಿಗಳು, ಕರ್ನಾಟಕ ಸರ್ಕಾರ ಹಾಗೂ ಪೂಜ್ಯ ಮಹಾಪೌರರು ಮತ್ತು ಆಯುಕ್ತರು ಮಹದೇವಪುರ ವಲಯದಲ್ಲಿ, ಮಂಡೂರು ಹಾಗೂ ಸುತ್ತಲಿನ ಗ್ರಾಮಸ್ಥರೊಂದಿಗೆ ಸಮನ್ವಯ ಸಮಿತಿ ಸಭೆ ನಡೆಸಿ ಬೆಂಗಳೂರು ಮಹಾನಗರದ ಘನತ್ಯಾಜ್ಯ ವಿಲೇವಾರಿಯ ಸಮಸ್ಯೆಯನ್ನು ವಿವರಿಸಿ ಕೋರಿದ ಮೇರೆಗೆ ಜನವರಿ-2013 ರವರೆಗೆ ಮಾತ್ರ ಮಂಡೂರು ಘಟಕಗಳಲ್ಲಿ ಘನತ್ಯಾಜ್ಯ ವಿಲೇವಾರಿಗೆ ಒಪ್ಪಿಗೆ ನೀಡಿರುತ್ತಾರೆ. ಸದರಿ ಮಂಡೂರು ಘಟಕಗಳಲ್ಲಿ ರಾತ್ರಿ 10.00 ರಿಂದ ಬೆಳಿಗ್ಗೆ 6.00 ಗಂಟೆವರೆಗೆ ಮಾತ್ರ ಘನತ್ಯಾಜ್ಯ ವಿಲೇವಾರಿ ಮಾಡಲಾಗುತ್ತಿತ್ತು. ಇದರಿಂದ ಸಂಬಂಧಿಸಿದ ಸಿಬ್ಬಂದಿಯು ಸಂಕಷ್ಟಕ್ಕೆ ಒಳಗಾಗಿರುತ್ತಾರೆ. ಅಲ್ಲದೆ ಮಂಡೂರು ಘಟಕಗಳಲ್ಲಿ ಜನವರಿ-2013 ರ ನಂತರ ಘನತ್ಯಾಜ್ಯ ವಿಲೇವಾರಿಯನ್ನು ಸ್ಥಳೀಯರು ಸ್ಥಗಿತಗೊಳಿಸುವ ಸಾಧ್ಯತೆಯಿರುತ್ತದೆ.

ಮೇಲಿನ ಹಿನ್ನೆಲೆಯಲ್ಲಿ ಮಾವಳ್ಳಿಪುರ ಘನತ್ಯಾಜ್ಯ ಸಂಸ್ಕರಣಾ ಘಟಕವನ್ನು ಪುನರಾರಂಭಿಸುವುದು ಅವಶ್ಯಕವಾಗಿದ್ದು, ಇದಕ್ಕಾಗಿ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯಿಂದ ಅನುಮತಿ ಪಡೆಯಲಾಗಿರುತ್ತದೆ. ಸದರಿ ಘಟಕವನ್ನು ಮೆ||ರಾಮ್ಕಿ ಸಂಸ್ಥೆಯವರು, ಮೆ||ಗ್ರೀನ್ ಅಂಡ್ ಕ್ಲೀನ್ ಸಲ್ಯೂಷನ್ ಪ್ರೈವೇಟ್ ಲಿಮಿಟೆಡ್ ಸಂಸ್ಥೆಯ ಸಹಭಾಗಿತ್ವದೊಂದಿಗೆ ಹೊಸ ತಂತ್ರಜ್ಞಾನ ಅಳವಡಿಸಿ ತ್ಯಾಜ್ಯದಿಂದ ವಿದ್ಯುತ್ ಉತ್ಪಾದಿಸುವ ಘಟಕ ಸ್ಥಾಪಿಸಲು ಪ್ರಸ್ತಾವನೆ ಸಲ್ಲಿಸಿ ಅನುಮೋದನೆ ಕೋರಿರುತ್ತಾರೆ.

ಸದರಿ ಸಂಸ್ಥೆಯೊಂದಿಗೆ ಪಾಲಿಕೆ ಮಾಡಿಕೊಂಡಿರುವ ಕರಾರಿನ ಪುಟ-3 ರಂತೆ "Concessionaire's Associates" Shall Mans any Company/ies which is/are Controlled by the Concessionaire. For the purpose of this definition "Control" Means the power to direct the Management or Policies of such entity, directly or indirectly, through the ownership of Shares or other securities, by Contract or otherwise, provided that the direct or indirect ownership of fifty one percent (51%) or more of it vitiating share capital is deemed to constitute control of such entity, and "controlling" and "controlled" shall be construed accordingly."

ಮತ್ತು ಪುಟ ಸಂಖ್ಯೆ: 19 Article 5.5 (b) ನಂತೆ

The Concessionaire may undertake operations and maintenance of the project facilities by itself or through a Contractor possessing requisite technical, financial and managerial expertise/capability: but in either case, the Concessioner shall remain solely responsible to meet the O & M requirements ಗಳಂತೆ ಬೇರೆ ಸಂಸ್ಥೆಯೊಂದಿಗೆ ಸಹಭಾಗಿತ್ವ ಮಾಡಿಕೊಳ್ಳಲು ಅವಕಾಶವಿರುತ್ತದೆ.

ಅಧ್ಯಕ್ಷರು
ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಬೆಂಗಳೂರು

ಮೆ॥ ರಾಮ್ಕೀ ಸಂಸ್ಥೆಯು ಈಗ ಮಾವಳ್ಳಿಪುರದ ಸರ್ವೆ ನಂ.೦೮ ರಲ್ಲಿ ಸ್ಥಾಪಿಸಿರುವ ಗೊಬ್ಬರ ತಯಾರಿಕಾ ಘಟಕಕ್ಕೆ ಸಂಸ್ಕರಣೆಗಾಗಿ ಸರಬರಾಜು ಮಾಡುತ್ತಿದ್ದ ಘನತ್ಯಾಜ್ಯದ ಸಂಸ್ಕರಣೆ ನಂತರ ಉಳಿಯುವ Inerts ನ ಪ್ರಮಾಣ ಶೇ.೬೦ ಎಂದು ಲೆಕ್ಕಹಾಕಿ ಕೆಳಗಿನಂತೆ ಸಂಸ್ಕರಣಾ ಶುಲ್ಕವನ್ನು ಪಾವತಿಸಲಾಗುತ್ತಿತ್ತು. (ಕರಾರು ಪುಟ ಸಂಖ್ಯೆ: ೯೩ ಷೆಡ್ಯೂಲ್-7).

| Sl. No. | Period | Tipping fee per ton of inerts in Rs. |
|---|---|---|
| 1 | 29-01-2007 to 31-03-2009 | 198.00 |
| 2 | 01-04-2009 to 31-03-2012 | 218.00 |
| 3 | 01-04-2012 to 31-03-2015 | 240.00 |
| 4 | 01-04-2015 to 31-03-2018 | 264.00 |
| 5 | 01-04-2018 to 31-03-2021 | 290.00 |
| 6 | 01-04-2021 to 31-03-2024 | 319.00 |
| 7 | 01-04-2024 to 31-03-2027 | 351.00 |

ಈ ಸಂಸ್ಕರಣಾ ಶುಲ್ಕವನ್ನು ಸರಬರಾಜು ಮಾಡುವ ಪ್ರತಿ ಮೆ. ಟನ್ ಘನತ್ಯಾಜ್ಯಕ್ಕೆ ಲೆಕ್ಕಹಾಕಿದ್ದಲ್ಲಿ ಶುಲ್ಕವು ಕೆಳಗಿನಂತಿರುತ್ತದೆ.

| Sl. No. | Period | Tipping fee per ton of inerts (inerts at 60% of MSW) in Rs. | Corresponding tipping fees per M.Ton of MSW in Rs. |
|---|---|---|---|
| 1 | 29-01-2007 to 31-03-2009 | 198.00 | 118.80 |
| 2 | 01-04-2009 to 31-03-2012 | 218.00 | 130.80 |
| 3 | 01-04-2012 to 31-03-2015 | 240.00 | 144.00 |
| 4 | 01-04-2015 to 31-03-2018 | 264.00 | 158.40 |
| 5 | 01-04-2018 to 31-03-2021 | 290.00 | 174.00 |
| 6 | 01-04-2021 to 31-03-2024 | 319.00 | 191.40 |
| 7 | 01-04-2024 to 31-03-2027 | 351.00 | 210.60 |

ಸದರಿ ಮಾವಳ್ಳಿಪುರ ಸಂಸ್ಕರಣಾ ಘಟಕವನ್ನು ದಿನಾಂಕ: 12-07-2012 ರಿಂದ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯ ನಿರ್ದೇಶನದಂತೆ ಸ್ಥಗಿತಗೊಳಿಸಿ ಮಂಡಳಿಯ ನಿರ್ದೇಶನದಂತೆ, ಘಟಕದಲ್ಲಿನ ಕಾಂಕ್ರೀಟ್ ಪ್ಲಾಟ್‌ಫಾರಂ ಮೇಲಿನ ಘನತ್ಯಾಜ್ಯವನ್ನು ಸಂಸ್ಕರಿಸಿ ಗೊಬ್ಬರವನ್ನಾಗಿಸಿದ ನಂತರ, ಸದರಿ ಘಟಕದಲ್ಲಿ ಘನತ್ಯಾಜ್ಯವನ್ನು ಸಮರ್ಪಕವಾಗಿ ಸಂಸ್ಕರಿಸಲು ಕೈಗೊಳ್ಳುವ ಕ್ರಮಗಳ ವಿವರಗಳನ್ನು ಸಲ್ಲಿಸಿದ ಮೇರೆಗೆ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯು ಸದರಿ ಘಟಕವನ್ನು ಪುನರಾರಂಭಿಸಿ ದಿನಾಂಕ: 31-12-2012 ರವರೆಗೆ ನಿರ್ವಹಿಸಲು ಅನುಮತಿಯನ್ನು ನೀಡಿರುತ್ತದೆ. (ಪ್ರತಿಯನ್ನು ಕಡತದಲ್ಲಿ ಲಗತ್ತಿಸಿದೆ). ಹಾಗೂ ದಿನಾಂಕ: 01-01-2013 ರಿಂದ 31-12-2013 ರವರೆಗೆ ಘಟಕವನ್ನು ನಿರ್ವಹಿಸಲು ಅನುವಾಗುವಂತೆ ಅನುಮತಿಯನ್ನು ನವೀಕರಿಸಲು, Concessionaire ರವರು ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಗೆ ಪ್ರಸ್ತಾವನೆಯನ್ನು ಸಲ್ಲಿಸಬೇಕಾಗಿರುತ್ತದೆ.

ಮುಂದುವರೆದು, ಸದರಿ ಮೆ॥ರಾಮ್ಕೀ ಎನರ್ಜಿ ಅಂಡ್ ಎನ್‌ವಿರಾನ್‌ಮೆಂಟ್ ಲಿಮಿಟೆಡ್ ಸಂಸ್ಥೆಗೆ ಪ್ರತಿದಿನ 1000 ಮೆ.ಟನ್ ಘನತ್ಯಾಜ್ಯ ಸಂಸ್ಕರಿಸಿ 10 ಮೆ.ವ್ಯಾ. ವಿದ್ಯುತ್ ಉತ್ಪಾದಿಸುವ ಘಟಕ ಸ್ಥಾಪನೆಗೆ ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿಯ ವಿಷಯದ ಸಂಖ್ಯೆ: ಸಾಆಸ್ಥಾಸ/31/2011-12, ದಿನಾಂಕ: 23-11-2011 ರಲ್ಲಿ ಹಾಗೂ ಪಾಲಿಕೆಯ ಸಭೆಯ ವಿಷಯದ ಸಂಖ್ಯೆ: 32(293)/2011-12, ದಿನಾಂಕ: 03-03-2012 ರಲ್ಲಿ ಅನುಮೋದನೆ ನೀಡಲಾಗಿದ್ದು, ಪತ್ರದ ಸಂಖ್ಯೆ: ಕಾಪಾಅ-2/ಘ.ತ್ಯಾ.ನಿ./ಪಿ.ಆರ್./58/2012-13, ದಿನಾಂಕ: 04-07-2012 ರಲ್ಲಿ ಒಪ್ಪಿಗೆ ಪತ್ರವನ್ನು ನೀಡಲಾಗಿರುತ್ತದೆ.

ಅಧ್ಯಕ್ಷರು
ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಬೆಂಗಳೂರು

ಈ ಒಪ್ಪಿಗೆ ಸಂಬಂಧಿಸಿದಂತೆ ಸದರಿ ರಾಮ್ಕಿ ಸಂಸ್ಥೆಯು ಕೆಳಗಿನ ಬೇಡಿಕೆಗಳನ್ನು ಮಂಡಿಸಿರುತ್ತದೆ.

1. Allot us the remaining 54 acres of land not yet allotted as per the terms of concession Agreement.

2. The allotted land should be free from all encumbrances or under any other dispute to restrict our entry or use including barriers to protect from interference by external parties.

3. As part of our efforts to set up WTE with reputed technology and machinery from abroad we are in process of filing tariff determination petition with KERC. We submit that in absence of tipping fee for processing, a viable tariff is imperative for sustaining WTE project. We seek BBMP support in this endeavor.

4. Timely payment of tipping fee for disposal being paid presently to be continued.

5. BBMP to take responsibility and ensure that there is no threat to the concessionaire in terms of life, material and property.

ಬೆಂಗಳೂರು ನಗರದ ಘನತ್ಯಾಜ್ಯವನ್ನು ಸಮರ್ಪಕವಾಗಿ ಸಂಸ್ಕರಿಸಿ ವಿಲೇವಾರಿ ಮಾಡುವ ನಿಟ್ಟಿನಲ್ಲಿ ಮಾವಳ್ಳಿಪುರ ಘನತ್ಯಾಜ್ಯ ಸಂಸ್ಕರಣಾ ಘಟಕವನ್ನು ಪುನರಾರಂಭಿಸಿ ಎಂ.ಎಸ್.ಡಬ್ಲ್ಯೂ. ನಿಯಮಾವಳಿ ಹಾಗೂ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯ ನಿರ್ದೇಶನದಂತೆ ನಿರ್ವಹಿಸುವ ನಿಟ್ಟಿನಲ್ಲಿ ಸದರಿ ಮೆ॥ರಾಮ್ಕಿ ಸಂಸ್ಥೆಯವರೊಂದಿಗೆ ಚರ್ಚಿಸಲಾಗಿ ಸದರಿ ಸಂಸ್ಥೆ ದಿನಾಂಕ: 27-10-2012 ರಲ್ಲಿ ಹಲವು ಬೇಡಿಕೆಗಳನ್ನು ಮುಂದಿಟ್ಟಿರುತ್ತಾರೆ.

ಮುಂದುವರೆದು, ಸದರಿ ಸಂಸ್ಥೆಯು ದಿನಾಂಕ: 30-11-2012 ರಲ್ಲಿ ಮಾನ್ಯ ಮುಖ್ಯಮಂತ್ರಿಗಳಿಗೆ ಪತ್ರವನ್ನು ಸಲ್ಲಿಸಿ, ಮೆ॥ ಗ್ರೀನ್ ಅಂಡ್ ಕ್ಲೀನ್ ಸಲ್ಯೂಷನ್ ಪ್ರೈವೇಟ್ ಲಿಮಿಟೆಡ್ ಸಂಸ್ಥೆಯ ತಾಂತ್ರಿಕ ಸಹಭಾಗಿತ್ವದೊಂದಿಗೆ/ಜಂಟಿತ್ವದೊಂದಿಗೆ Mavallipura Solid Waste Management Pvt. Ltd., ಹೆಸರಿನಲ್ಲಿ Special purpose vehicle (SPV) ಸ್ಥಾಪಿಸಿ ಹೊಸ ತಂತ್ರಜ್ಞಾನ ಅಳವಡಿಸಿ ಘನತ್ಯಾಜ್ಯದಿಂದ ವಿದ್ಯುತ್ ಉತ್ಪಾದಿಸುವ ಘಟಕವನ್ನು ಸ್ಥಾಪಿಸಿ ಕೆಳಗಿನಂತೆ ಘನತ್ಯಾಜ್ಯವನ್ನು ಸಮರ್ಪಕವಾಗಿ ನಿರ್ವಹಿಸುವುದಾಗಿ ತಿಳಿಸಿರುತ್ತಾರೆ.

a) The existing land is sufficient to process the 1000 TPD waste and to establish the processing facility.

b) The entire operations are going to be done in closured chambers and hence there is no scope for outdoor nuisance, leachate and public complaints.

c) The process is completely automatic and continuous and hence no need to store.

d) The segregation is done automatically by unique extrusion process and the entire process area would look like the one in pharmaceutical industries.

e) There will be ionized air circulation in the process area to give the comfort to the operators and also to arrest the outdoor problem.

ಅಧ್ಯಕ್ಷರು
ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಬೆಂಗಳೂರು

f) Gets a superior quality of compost with the compost processing done in controlled conditions and in green house.

g) Enhances calorific value of RDF.

h) The process has zero discharge and hence no scope for water pollution, leachate and ground water contamination.

i) A sophisticated machinery for the management of plastics, pet bottles alone.

ಸದರಿ ಮೆ||ಗ್ರೀನ್ ಅಂಡ್ ಕ್ಲೀನ್ ಸಲ್ಯೂಷನ್ ಪ್ರೈವೇಟ್ ಲಿಮಿಟೆಡ್ ಸಂಸ್ಥೆಯ ತಾಂತ್ರಿಕ ಸಹಭಾಗಿತ್ವದೊಂದಿಗೆ ಸ್ಥಾಪಿಸಲಾಗುವ ಘನತ್ಯಾಜ್ಯದಿಂದ ವಿದ್ಯುತ್ ಉತ್ಪಾದಿಸುವ ಘಟಕದ ಯೋಜನೆಗೆ ರೂ.280 ಕೋಟಿಗಳಿಗೂ ಹೆಚ್ಚು ಹಣವನ್ನು ತೊಡಗಿಸಬೇಕಾಗಿದ್ದು, ಇದಕ್ಕಾಗಿ ಪಾಲಿಕೆಯಿಂದ ಈ ಕೆಳಗಿನ ಬೆಂಬಲ/ಸೌಲಭ್ಯಗಳನ್ನು ಕೇಳಿರುತ್ತಾರೆ.

a) Developed entrance road and compound wall.

b) Since the investment is huge, the tipping fees agreed in the original & present tender paid to Ramky may kindly be revised from Rs.160/- to Rs.290/- per Ton for the intake of Municipal Solid Waste after setting up the Waste to Energy Project and successfully showing the operation for 3 months.

ಮುಂದುವರೆದು ಮೆ||ರಾಮ್ಕಿ ಎನರ್ಜಿ ಅಂಡ್ ಎನ್‌ವಿರಾನ್‌ಮೆಂಟ್ ಲಿಮಿಟೆಡ್ ಹಾಗೂ ಮೆ||ಗ್ರೀನ್ ಅಂಡ್ ಕ್ಲೀನ್ ಸಲ್ಯೂಷನ್ ಪ್ರೈವೇಟ್ ಲಿಮಿಟೆಡ್ ಸಂಸ್ಥೆಗಳವರು ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯ ಪರಿಸರ ಭವನದಲ್ಲಿ ದಿನಾಂಕ: 23-12-2012 ರಂದು, ಅಧ್ಯಕ್ಷರು, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ, ಪಾಲಿಕೆ ಆಯುಕ್ತರು ಹಾಗೂ ಮಂಡಳಿಯ ಮತ್ತು ಪಾಲಿಕೆಯ ಹಿರಿಯ ಅಧಿಕಾರಿಗಳ ಸಮ್ಮುಖದಲ್ಲಿ, ಸದರಿ ಮೆ||ಗ್ರೀನ್ ಅಂಡ್ ಕ್ಲೀನ್ ಸಲ್ಯೂಷನ್ ಪ್ರೈವೇಟ್ ಲಿಮಿಟೆಡ್ ಸಂಸ್ಥೆಯ ತಾಂತ್ರಿಕ ಸಹಭಾಗಿತ್ವದೊಂದಿಗೆ ಸ್ಥಾಪಿಸಲು ಉದ್ದೇಶಿಸಿರುವ Waste to Energy ಯೋಜನೆಯ ತಂತ್ರಜ್ಞಾನದ ಪ್ರದರ್ಶನವನ್ನು (Technical presentation) ನೀಡಿ, ಈ ತಂತ್ರಜ್ಞಾನದ ಅಡಿಯಲ್ಲಿ ಘನತ್ಯಾಜ್ಯವನ್ನು ಸಂಸ್ಕರಿಸಿದ ನಂತರ ಅಂತಿಮವಾಗಿ ಕೇವಲ ಶೇಕಡಾ 5 ರಿಂದ 10 ರಷ್ಟು Inerts ಮಾತ್ರ ಉಳಿಯುವುದಾಗಿ ಹಾಗೂ ಇದರಿಂದಾಗಿ Landfill ಗೆ ಬೇಕಾಗಿರುವ ಜಾಗವನ್ನು ಕನಿಷ್ಠಗೊಳಿಸಬಹುದೆಂದು ತಿಳಿಸುತ್ತಾ, ತಂತ್ರಜ್ಞಾನದ ವಿವರಗಳು ಕೆಳಗಿನಂತಿರುತ್ತವೆಂದು ತಿಳಿಸಿರುತ್ತಾರೆ.

1. Fully Automated Segregation System.
2. Organic waste to be subjected to anaerobic digestion.
3. Digestrate to be converted to manure under controlled condition in polyhouses.
4. Plastics to be depolmeriesd.
5. Inorganic combustable waste to be subjected to Gasification.
6. Inters, Construction deris to be used for Blocks marking.

ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯ ದಿನಾಂಕ: 23-12-2012ರ ಸಭೆಯಲ್ಲಿ ನಡೆದ ಚರ್ಚೆಗಳ ಮುಂದುವರೆದ ಭಾಗವಾಗಿ, ಸದರಿ ಮೆ||ರಾಮ್ಕಿ ಎನರ್ಜಿ ಅಂಡ್ ಎನ್‌ವಿರಾನ್‌ಮೆಂಟ್ ಲಿಮಿಟೆಡ್ ಸಂಸ್ಥೆಯು ದಿನಾಂಕ: 26-12-2012 ರಂದು ಪಾಲಿಕೆಗೆ ಮತ್ತೊಂದು ಪತ್ರ ನೀಡಿ ಕೆಳಗಿನಂತೆ ತಿಳಿಸಿರುತ್ತದೆ.

ಅಧ್ಯಕ್ಷರು
ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಬೆಂಗಳೂರು

1. We will form the SPV in the name of "Mavallipura Solid Waste Management (P) Ltd.," with our Technical Partners M/s.Green & Clean Solutions Pvt. Ltd., and apply for the renewal of Consent for Operation to KSPCB which expires on 31-12-2012.

2. Upon the receipt of CFO, we shall start accepting 300 TPD of waste as suggested by your good self. Meanwhile we shall start the maintenance work site.

3. We shall commence the financial closure process and the project planning and placement of orders to setup the waste to energy project.

4. We shall also plan to start processing the accumulated waste once the Gossipier is commissioned.

In this regard, we request you to kindly give us Permission to go ahead with the above proposal and also to fix up the tipping fee based on the waste received at site, as the advanced technology with an investment of Rs.280 Corers would not produce any inerts and your support is sought to make the project viable.

ಸದರಿ ಸಂಸ್ಥೆ ಕೋರಿರುವ ಬೆಂಬಲ/ಸೌಲಭ್ಯಗಳ ಪೈಕಿ;

1. ಯಲಹಂಕ-ಮಾವಳ್ಳಿಪುರ ರಸ್ತೆಯಿಂದ ಘಟಕದವರೆಗಿನ ಅಭಿವೃದ್ಧಿಗೊಳಿಸಲು ಬೇಕಾಗಿರುವ ರಸ್ತೆಯ ಭಾಗವು ನ್ಯಾಯಾಲಯದಲ್ಲಿ ವಿಚಾರಣೆಯಲ್ಲಿರುತ್ತದೆ.

   ಈಗಾಗಲೇ ಮಾಡಿಕೊಂಡಿರುವ ಕರಾರಿನಂತೆ, ಕಾಂಪೌಂಡ್ ಗೋಡೆಯನ್ನು ಸದರಿ ಸಂಸ್ಥೆಯೇ ನಿರ್ಮಿಸಿಕೊಳ್ಳಬೇಕಾಗಿರುತ್ತದೆ.

2. ಕರಾರಿನಂತೆ ಸದರಿ ಸಂಸ್ಥೆಗೆ ದಿನಾಂಕ: 01-04-2012 ರಿಂದ ಅನ್ವಯವಾಗುವಂತೆ, ಸರಬರಾಜು ಮಾಡುವ ಘನತ್ಯಾಜ್ಯದ ಶೇ.60 ರಷ್ಟು Inerts ಗೆ ರೂ.240/-ಗಳ ಸಂಸ್ಕರಣಾ ಶುಲ್ಕ ಪಾವತಿಸಬೇಕಾಗಿದ್ದು, ಸದರಿ ಸಂಸ್ಥೆಯು ಹೊಸ ತಂತ್ರಜ್ಞಾನದೊಂದಿಗೆ ಘನತ್ಯಾಜ್ಯದಿಂದ ವಿದ್ಯುತ್ ಉತ್ಪಾದನೆಯ ಘಟಕವನ್ನು ಸ್ಥಾಪಿಸಿ ಮೂರು ತಿಂಗಳು ಸಮರ್ಪಕವಾಗಿ ನಿರ್ವಹಿಸಿದ ನಂತರ ಪಾಲಿಕೆಯಿಂದ ಸರಬರಾಜು ಮಾಡುವ ಪ್ರತಿ ಟನ್ ಘನತ್ಯಾಜ್ಯಕ್ಕೆ ರೂ.290/- ಗಳ ಸಂಸ್ಕರಣಾ ಶುಲ್ಕವನ್ನು ಪಾವತಿಸಲು ಹಾಗೂ ಅಲ್ಲಿಯವರೆಗೆ ಈಗಿನ ಕರಾರಿನಂತೆ ಟಿಪ್ಪಿಂಗ್ ಶುಲ್ಕವನ್ನು ಪಾವತಿಸಲು ಕೋರಲಾಗಿರುತ್ತದೆ.

ಪ್ರಸ್ತುತ ಬೆಂಗಳೂರು ಮಹಾನಗರದ ಘನತ್ಯಾಜ್ಯ ವಿಲೇವಾರಿಯಲ್ಲಿ ಉಂಟಾಗಿರುವ ವ್ಯತ್ಯಯ ಹಾಗೂ ಸಮಸ್ಯೆಯನ್ನು ಬಗೆಹರಿಸುವ ನಿಟ್ಟಿನಲ್ಲಿ ಮತ್ತು ಸರ್ವೆ ನಂ.08, ಮಾವಳ್ಳಿಪುರ ಘನತ್ಯಾಜ್ಯ ಸಂಸ್ಕರಣಾ ಘಟಕವನ್ನು ಪುನರಾರಂಭಿಸಿ ಸಮರ್ಪಕವಾಗಿ ನಿರ್ವಹಿಸಲು, ಸದರಿ ಮೆ॥ರಾಮ್ಕೀ ಎನರ್ಜಿ ಅಂಡ್ ಎನ್‌ವಿರಾನ್‌ಮೆಂಟ್ ಲಿಮಿಟೆಡ್ ಸಂಸ್ಥೆಯು, ಮೆ॥ಗ್ರೀನ್ ಅಂಡ್ ಕ್ಲೀನ್ ಸಲ್ಯೂಷನ್ ಪ್ರೈವೇಟ್ ಲಿಮಿಟೆಡ್ ಸಂಸ್ಥೆಯೊಂದಿಗೆ ಸಹಭಾಗಿತ್ವದಲ್ಲಿ (Special

ಅಧ್ಯಕ್ಷರು
ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಬೆಂಗಳೂರು

purpose vehicle) ಹೊಸ ತಂತ್ರಜ್ಞಾನ ಅಳವಡಿಸಿ ಘನತ್ಯಾಜ್ಯದಿಂದ ವಿದ್ಯುತ್ ಘಟಕ ಸ್ಥಾಪನೆಗೆ ಈ ಕೆಳಗಿನ ಅಂಶಗಳಿಗೆ ಅನುಮೋದನೆ ಕೋರಿದೆ.

1. ಮೆ||ರಾಮ್ಕೀ ಎನರ್ಜಿ ಅಂಡ್ ಎನ್‌ವೈರ್ನಮೆಂಟ್ ಲಿಮಿಟೆಡ್ ಸಂಸ್ಥೆಯು ಪ್ರತಿದಿನ 1000 ಮೆಟ್ರಿಕ್ ಟನ್ ಘನತ್ಯಾಜ್ಯವನ್ನು ಸಂಸ್ಕರಿಸುವ ಘಟಕವನ್ನು, ಮೆ||ಗ್ರೀನ್ ಅಂಡ್ ಕ್ಲೀನ್ ಸಲ್ಯೂಷನ್ ಪ್ರೈವೇಟ್ ಲಿಮಿಟೆಡ್ ಸಂಸ್ಥೆಯ ತಾಂತ್ರಿಕ ಸಹಭಾಗಿತ್ವದೊಂದಿಗೆ/ಜಂಟಿತ್ವದೊಂದಿಗೆ Mavallipura Solid Waste Management Pvt. Ltd., ಹೆಸರಿನಲ್ಲಿ Special purpose vehicle (SPV) ಸ್ಥಾಪಿಸಿ ಹೊಸ ತಂತ್ರಜ್ಞಾನ ಅಳವಡಿಸಿ ಘನತ್ಯಾಜ್ಯದಿಂದ ವಿದ್ಯುತ್ ಉತ್ಪಾದಿಸುವ ಪ್ರಸ್ತಾವನೆಗೆ ಮಾನ್ಯತೆ ನೀಡಲು ಒಪ್ಪಿಗೆ.

2. ಸದರಿ ಉದ್ದೇಶಿತ ಪ್ರತಿದಿನ 1000 ಮೆಟ್ರಿಕ್ ಟನ್ ಘನತ್ಯಾಜ್ಯವನ್ನು ಸಂಸ್ಕರಿಸಿ ವಿದ್ಯುತ್ ಉತ್ಪಾದಿಸುವ ಘಟಕ ಸ್ಥಾಪಿಸಿ 3 (ಮೂರು) ತಿಂಗಳು ಯಶಸ್ವಿ ಮತ್ತು ಸಮರ್ಪಕವಾಗಿ ನಿರ್ವಹಿಸುವವರೆಗೆ, ಪಾಲಿಕೆಯಿಂದ ಸರಬರಾಜು ಮಾಡುವ ಪ್ರತಿ ದಿನ 300 ಮೆ.ಟನ್ ಅಥವಾ ಹೆಚ್ಚು ಘನತ್ಯಾಜ್ಯಕ್ಕೆ ಈಗಾಗಲೇ ಮೆ|| ರಾಮ್ಕಿ ಸಂಸ್ಥೆಯೊಂದಿಗೆ ಮಾಡಿಕೊಂಡಿರುವ ಹಾಲಿ ಕರಾರಿನಂತೆ ಇದುವರೆವಿಗೂ ಪಾವತಿಸುತ್ತಿರುವ ಶೇಕಡ 60 ರಷ್ಟು Inerts ಗೆ ಸಂಸ್ಕರಣಾ ಶುಲ್ಕವನ್ನು (Tipping fee) ಪಾವತಿಸಲು ಅನುಮೋದನೆ.

3. ಮೆ||ರಾಮ್ಕೀ ಎನರ್ಜಿ ಅಂಡ್ ಎನ್‌ವೈರ್ನಮೆಂಟ್ ಲಿಮಿಟೆಡ್ ಸಂಸ್ಥೆಯು ಪ್ರತಿದಿನ 1000 ಮೆಟ್ರಿಕ್ ಟನ್ ಘನತ್ಯಾಜ್ಯವನ್ನು ಸಂಸ್ಕರಿಸುವ ಘಟಕವನ್ನು, ಮೆ||ಗ್ರೀನ್ ಅಂಡ್ ಕ್ಲೀನ್ ಸಲ್ಯೂಷನ್ ಪ್ರೈವೇಟ್ ಲಿಮಿಟೆಡ್ ಸಂಸ್ಥೆಯ ತಾಂತ್ರಿಕ ಸಹಭಾಗಿತ್ವದೊಂದಿಗೆ/ಜಂಟಿತ್ವದೊಂದಿಗೆ Mavallipura Solid Waste Management Pvt. Ltd., ಹೆಸರಿನಲ್ಲಿ ಸ್ಥಾಪಿಸಿ 3 (ಮೂರು) ತಿಂಗಳು ಯಶಸ್ವಿ ಮತ್ತು ಸಮರ್ಪಕವಾಗಿ ನಿರ್ವಹಿಸಿದ ನಂತರ, ಪಾಲಿಕೆಯಿಂದ ಸರಬರಾಜು ಮಾಡುವ ಪ್ರತಿ ಮೆ. ಟನ್ ಘನತ್ಯಾಜ್ಯಕ್ಕೆ ಕೆಳಗಿನ ತಖ್ತೆಯಂತೆ ಸಂಸ್ಕರಣಾ ಶುಲ್ಕ ಪಾವತಿಸಲು ಅನುಮೋದನೆ.

| Sl. No. | Period | Tipping fees (Processing fees) per M.Ton of MSW in Rs. |
|---|---|---|
| 1 | 01-04-2012 to 31-03-2015 | 144.00 |
| 2 | 01-04-2015 to 31-03-2018 | 158.40 |
| 3 | 01-04-2018 to 31-03-2021 | 174.00 |
| 4 | 01-04-2021 to 31-03-2024 | 191.40 |
| 5 | 01-04-2024 to 31-03-2027 | 210.60 |

4. ಸದರಿ ಮಾವಳ್ಳಿಪುರ ಘನತ್ಯಾಜ್ಯ ನಿರ್ವಹನೆ ಘಟಕಕ್ಕೆ ಅವಶ್ಯವಿರುವ ಉಳಿಕೆ 54 ಎಕರೆ ಪ್ರದೇಶವನ್ನು ಸಾಮಾನ್ಯ ಭೂಸ್ವಾಧೀನ್ ಪ್ರಕ್ರಿಯೆ ಅಥವಾ Consent Award ನ ಪ್ರಕ್ರಿಯೆಯೊಂದಿಗೆ ಭೂಸ್ವಾಧೀನ ಪಡಿಸಿಕೊಳ್ಳಲು ಅನುಮೋದನೆ.

5. ಮೇಲಿನ ಪ್ರಸ್ತಾವನೆಗೆ ಅನುಮೋದನೆ ದೊರೆತು, ಮಾವಳ್ಳಿಪುರ ಘನತ್ಯಾಜ್ಯ ಸಂಸ್ಕರಣಾ ಘಟಕವನ್ನು ಪುನರಾರಂಭಿಸಲು ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯಿಂದ ಅನುಮತಿ ದೊರೆತ 45 (ನಲವತ್ತೈದು) ದಿನಗಳ ನಂತರ ಹಾಲಿ ಮಾವಳ್ಳಿಪುರ ಘಟಕದಲ್ಲಿ

ಅಧ್ಯಕ್ಷರು
ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಬೆಂಗಳೂರು

ಜಮಾವಣೆಯಾಗಿರುವ ಘನತ್ಯಾಜ್ಯವನ್ನು, ಪ್ರಾರಂಭದಲ್ಲಿ ಪ್ರತಿದಿನ 100 (ನೂರು) ಮೆ. ಟನ್ ಹಾಗೂ ಪೂರ್ಣ ಪ್ರಮಾಣದ ಘಟಕ ಸ್ಥಾಪನೆಯಾದ ನಂತರ ಹೆಚ್ಚಿನ ಪ್ರಮಾಣದ ಘನತ್ಯಾಜ್ಯವನ್ನು ಶುಲ್ಕವಿಲ್ಲದೆ ಸಂಸ್ಕರಿಸಲು ಅನುಮೋದನೆ.

6. ಮೇಲಿನ ಎಲ್ಲಾ ಅಂಶಗಳನ್ನೊಳಗೊಂಡಂತೆ, ಪರಿಶೀಲಿಸಿ ನಿಯಮಾನುಸಾರ ಸದರಿ ಮೆ॥ ರಾಮ್ಕಿ ಸಂಸ್ಥೆಯೊಂದಿಗೆ ಪೂರಕ ಕರಾರನ್ನು ಮಾಡಿಕೊಳ್ಳಲು ಆಯುಕ್ತರಿಗೆ ಪೂರ್ಣ ಅಧಿಕಾರ ನೀಡಲು ಅನುಮೋದನೆ.

ಕೋರಿ ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿ ಮುಂದೆ ಮಂಡಿಸಲಾಗಿರುವ ಟಿಪ್ಪಣಿ.

**ನಿರ್ಣಯ:**

**ಆಯುಕ್ತರ ದಿನಾಂಕ: 29-12-2012ರ ಟಿಪ್ಪಣಿಯನ್ನು ಒಪ್ಪಲು ಸಮಿತಿಯು ತೀರ್ಮಾನಿಸಿತು.**

**13. ವಿಷಯದ ಸಂಖ್ಯೆ: ಸಾಆಸ್ಥಾಸ/78/2012-13:**

ವಿಶೇಷ ಆಯುಕ್ತರು (ಯೋಜನೆ) ರವರ ದಿನಾಂಕ: 29-12-2012 ರ ಟಿಪ್ಪಣಿಯಲ್ಲಿ ವಿವರಿಸಿರುವಂತೆ, ವಾರ್ಡ್ ಸಂಖ್ಯೆ: 105 ರ ಸದಸ್ಯರಾದ ಶ್ರೀಮತಿ.ರೂಪಾದೇವಿ ರವರು ತಮ್ಮ ವಾರ್ಡ್ ವ್ಯಾಪ್ತಿಯಲ್ಲಿರುವ ಹೊಸಹಳ್ಳಿ ರೆಫರಲ್ ಆಸ್ಪತ್ರೆಯ ನೆಲ ಮಹಡಿಯ ನವೀಕರಣ ಮತ್ತು ಅಭಿವೃದ್ಧಿಗಾಗಿ ಈ ಕೆಳಕಂಡ 17 ಕಾಮಗಾರಿಗಳನ್ನು ರೂ.160.00 ಲಕ್ಷಗಳ ಅನುದಾನದಲ್ಲಿ ಕೈಗೊಳ್ಳಲು ಕೋರಿದ್ದಾರೆ. ಈ ಬಗ್ಗೆ ಮುಖ್ಯ ಲೆಕ್ಕಾಧಿಕಾರಿಗಳ ಅಭಿಪ್ರಾಯ ಪಡೆಯಲಾಗಿದ್ದು, ಸದರಿ ವೆಚ್ಚವನ್ನು ಆರೋಗ್ಯ ಇಲಾಖೆ ಕಟ್ಟಡ ನಿರ್ಮಾಣ ಲೆಕ್ಕಶೀರ್ಷಿಕೆ ಅಡಿಯಲ್ಲಿ ಕೈಗೊಳ್ಳಬಹುದಾಗಿ ಅಭಿಪ್ರಾಯ ನೀಡಿದ್ದಾರೆ. ಆದ್ದರಿಂದ ಈ ಕಾಮಗಾರಿಯನ್ನು ಲೆಕ್ಕಶೀರ್ಷಿಕೆ "ಪಿ-1812" (ಪುಟ-85) ಅಡಿಯಲ್ಲಿ ಭರಿಸಬಹುದಾಗಿದೆ.

| ಕ್ರಮ ಸಂಖ್ಯೆ | ಕಾಮಗಾರಿ ಹೆಸರು | ಮೊತ್ತ ರೂ. (ಲಕ್ಷಗಳಲ್ಲಿ) |
|---|---|---|
| 1 | ವಾರ್ಡ್ ಸಂಖ್ಯೆ: 105 ಹಾಲಿ ಇರುವ ಬೋರವೆಲ್ ದುರಸ್ಥಿಯೊಂದಿಗೆ ಒಂದು ಹೊಸದಾಗಿ ಬೋರವೆಲ್‌ನ್ನು ಅಳವಡಿಸುವುದು | 8.00 |
| 2 | ವಾರ್ಡ್ ಸಂಖ್ಯೆ: 105 ಹಾಲಿ ಇರುವ ಶೌಚಾಲಯಗಳ ದುರಸ್ಥಿ ಹಾಗೂ ಒಳಚರಂಡಿ ಕೊಳವೆ ಮಾರ್ಗಗಳನ್ನು ಬದಲಾಯಿಸಿ, ಹೊಸದಾಗಿ ಲೈನ್ ಅಳವಡಿಸುವುದು | 8.00 |
| 3 | ಸಾರ್ವಜನಿಕರಿಗಾಗಿ ಹೊಸದಾಗಿ ಆಸ್ಪತ್ರೆಯ ಆವರಣದಲ್ಲಿ ಶೌಚಾಲಯ ನಿರ್ಮಾಣ | 10.00 |
| 4 | ನೆಲ ಮಹಡಿಯಲ್ಲಿ ವಿದ್ಯುದ್ಧೀಕರಣದ ನವೀಕರಣ ಹಾಗೂ ಜನರೇಟರ್ ಅಳವಡಿಸುವುದು | 25.00 |
| 5 | ಹಾಳಾಗಿರುವ ನೆಲ ಮಹಡಿಯ ಸೀಲಿಂಗ್ ಮತ್ತು ಗೋಡೆಗಳ ಪ್ಲಾಸ್ಟರಿಂಗ್ ಮಾಡುವುದು | 6.00 |
| 6 | ಬಾಗಿಲು, ಕಿಟಕಿ ಮತ್ತು ವೆಂಟಿಲೇಟರ್‌ಗಳನ್ನು ಬದಲಾಯಿಸುವಿಕೆ | 3.00 |
| 7 | ಸ್ವಾಗತಕಾರರ ಕೊಠಡಿ ನಿರ್ಮಾಣ ಮತ್ತು ನವೀಕರಣ | 3.00 |
| 8 | ಕಿಟಕಿ ಮತ್ತು ವೆಂಟಿಲೇಟರ್‌ಗಳಿಗೆ ಮೆಶ್ ಅಳವಡಿಸುವುದು | 3.00 |
| 9 | ನವೀನ ರೀತಿಯ ಪೀಠೋಪಕರಣ ಒದಗಿಸುವುದು ಕಟ್ಟಡಕ್ಕೆ ಬಣ್ಣ ಹಚ್ಚುವುದು | 20.00 |
| 10 | ಕಟ್ಟಡಕ್ಕೆ ಬಣ್ಣ ಹಚ್ಚುವುದು | 5.00 |
| 11 | ಆಸ್ಪತ್ರೆ ಆವರಣದ ಸುತ್ತಲೂ ಚರಂಡಿ ನಿರ್ಮಾಣ ಗ್ರೀಲ್ ಅಳವಡಿಸುವುದು | 10.00 |
| 12 | ಮಳೆ ನೀರು ಕೊಯ್ಲು ಅಳವಡಿಸುವುದು | 5.00 |

S. Venkatesh Babu
ಅಧ್ಯಕ್ಷರು
ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಬೆಂಗಳೂರು

| | | |
|---|---|---|
| 13 | ಎಪ್ಲುಯೆಂಟ್ ಟ್ರೀಟ್‌ಮೆಂಟ್ ಪ್ಲಾಂಟ್ ನಿರ್ಮಿಸುವುದು | 2.00 |
| 14 | ಇತರೇ ವೆಚ್ಚಗಳು | 2.00 |
| 15 | ಆವರಣದಲ್ಲಿನ ವಸತಿ ಗೃಹಗಳ ದುರಸ್ಥಿ ಮಾಡುವುದು | 15.00 |
| 16 | ಮೊದಲನೇ ಮಹಡಿಯಲ್ಲಿ ಬೇಬಿ ಕೇರ್ ಸೆಂಟರ್ ನಿರ್ಮಿಸುವುದು | 20.00 |
| 17 | ಸುತ್ತಲೂ ಕಾಂಪೌಂಡ್ ಗೋಡೆಯ ಮೇಲೆ ಗ್ರೀಲ್‌ನ್ನು ಅಳವಡಿಸುವುದು | 15.00 |
| | **Total** | 160.00 |

ಕಾರ್ಯಪಾಲಕ ಅಭಿಯಂತರರು (ಯೋಜನೆ-ಪಶ್ಚಿಮ) ರವರು ಮೇಲ್ಕಂಡ 17 ಕಾಮಗಾರಿಗಳಿಗೆ ಅನುಮೋದನೆ ಹಾಗೂ ತುರ್ತು ಇರುವುದರಿಂದ ಕೆ.ಆರ್.ಐ.ಡಿ.ಎಲ್. ಮೂಲಕ ನಿರ್ವಹಿಸಲು ಸೂಕ್ತ ತೀರ್ಮಾನಕ್ಕಾಗಿ ವಿಷಯವನ್ನು ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿ ಮುಂದೆ ಅನುಮೋದನೆ ಕೋರಿ ಮಂಡಿಸಿದೆ.

**ನಿರ್ಣಯ:**

**ವಿಶೇಷ ಆಯುಕ್ತರು (ಯೋಜನೆ) ರವರ ದಿನಾಂಕ: 29-12-2012 ರ ಟಿಪ್ಪಣಿಯನ್ನು ಒಪ್ಪಲು ಸಮಿತಿಯು ತೀರ್ಮಾನಿಸಿತು.**

**14. ವಿಷಯದ ಸಂಖ್ಯೆ: ಸಾಆಸ್ಥಾಸ/79/2012-13:**

ಆಯುಕ್ತರು ರವರ ದಿನಾಂಕ: 26-12-2012 ರ ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಪಾಲಿಕೆಯ ಆಸ್ಪತ್ರೆಗಳಿಗೆ ಅವಶ್ಯವಿದ್ದ ಔಷಧಿ (Tablets, Capsules, Syrups & Injections) ಕರೆಯಲಾಗಿದ್ದ ಟೆಂಡರ್‌ನಲ್ಲಿ ಒಟ್ಟಾರೆ 07 ಸಂಸ್ಥೆಗಳು ಭಾಗವಹಿಸಿದ್ದು, ಈ ಪೈಕಿ 04 ಮಂದಿ ಬಿಡ್ಡುದಾರರ ಟೆಂಡರ್‌ಗಳು Accept ಆಗಿದ್ದು, ಉಳಿದ 03 ಸಂಸ್ಥೆಗಳ ಟೆಂಡರ್‌ಗಳು Reject ಆಗಿರುತ್ತವೆ. ವಿವರ ಈ ಕೆಳಕಂಡಂತಿರುತ್ತದೆ.

| Sl. No. | Name of the Bidder | Bid Status |
|---|---|---|
| **1** | **Asha vijaykumar (Anuj Pharma)** | **Accepted** |
| 2 | B.R. Niranjan Murthy (Viv Span Labs) | Rejected |
| 3 | Mahaveer Porwar (Mahaveer Pharma Agencies) | Rejected |
| 4 | Manjit Singh (Creative Health Care Pvt. Ltd.,) | Rejected |
| **5** | **Prem Latha (Rajalaxmi Agencies)** | **Accepted** |
| **6** | **Shrivastava Rajivakumar (Galpha Laboratories Ltd.,)** | **Accepted** |
| **7** | **Vijay Kumar S (Merell Pharmaceuticals Co.)** | **Accepted** |

Accept ಆಗಿದ್ದ 04 ಮಂದಿ ಬಿಡ್ಡುದಾರರ ಟೆಂಡರ್ ದಾಖಲಾತಿಗಳನ್ನು ಪರಿಶೀಲಿಸಲಾಗಿದ್ದು, ಈ ಪೈಕಿ **ಮೆ॥ ಅನೂಜ್ ಫಾರ್ಮ** ಮತ್ತು **ಮೆ॥ ಮೆರಿಲ್ ಫಾರ್ಮಾಸ್ಯೂಟಿಕಲ್ಸ್** ಕಂ. **ರವರು** ಟೆಂಡರ್ ನಿಯಮಾವಳಿ ರೀತ್ಯ ಎಲ್ಲಾ ದಾಖಲಾತಿಗಳು ಮತ್ತು Specification ರೀತ್ಯ ಸ್ಯಾಂಪಲ್ಸ್‌ಗಳನ್ನು ಸಲ್ಲಿಸಿದ್ದು, **ತಾಂತ್ರಿಕವಾಗಿ ಅರ್ಹರಾಗಿರುತ್ತವೆ.**

ಉಳಿದ ಎರಡು ಸಂಸ್ಥೆಗಳು ಟೆಂಡರ್ Specification ನಲ್ಲಿ ಕೇಳಲಾಗಿರುವ ಎಲ್ಲಾ 51 ಔಷಧಿಗಳಿಗೆ ಟೆಂಡರ್ ಸಲ್ಲಿಸದೇ ಕ್ರಮ ಸಂಖ್ಯೆ: (5) ರಲ್ಲಿನ ಮೆ॥ ರಾಜಲಕ್ಷ್ಮೀ ಏಜೆನ್ಸೀಸ್‌ರವರು **47 ಔಷಧಿಗಳಿಗೂ** ಕ್ರಮ ಸಂಖ್ಯೆ: (6) ರಲ್ಲಿನ ಮೆ॥

ಅಧ್ಯಕ್ಷರು
ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಬೆಂಗಳೂರು

ಗಾಲ್ಫಾ ಲ್ಯಾಬೋರೇಟರೀಸ್‌ರವರು ಕೇವಲ 07 ಔಷಧಿಗಳಿಗೆ ಮಾತ್ರ ಟೆಂಡರ್ ಸಲ್ಲಿಸಿರುವುದರಿಂದ ತಾಂತ್ರಿಕವಾಗಿ ಅನರ್ಹಗೊಂಡಿರುತ್ತವೆ. ತಾಂತ್ರಿಕ ಸಮಿತಿಯ ನಡವಳಿಕೆಗಳನ್ನು ಕಡತದ ಪುಟ-59 ರಲ್ಲಿ ಲಗತ್ತಿಸಿದೆ.

ತಾಂತ್ರಿಕವಾಗಿ ಅರ್ಹವಾಗಿರುವ **ಮೆ॥ ಅನೂಜ್‌ಫಾರ್ಮ** ಮತ್ತು **ಮೆ॥ ಮೆರಿಲ್ ಫಾರ್ಮಸ್ಯೂಟಿಕಲ್** ಕಂ. ರವರ ಆರ್ಥಿಕ ಬಿಡ್ಡುಗಳನ್ನು ತೆರೆಯಲಾಗಿದ್ದು, ಸದರಿ ಸಂಸ್ಥೆಗಳು ಔಷಧಿಗಳಿಗೆ ನಮೂದಿಸಿರುವ ದರಪಟ್ಟಿಯ ರೀತ್ಯ ದರ ವ್ಯತ್ಯಾಸ ಪಟ್ಟಿ ತಯಾರಿಸಿದೆ. ವಿವರ ಈ ಕೆಳಕಂಡಂತಿರುತ್ತದೆ.

| Sl. No. | Name of the Drugs with Specification | Quantity | Rate quoted by Merell Pharmaceuticals | Total | Rate quoted by Anuj Pharma | Total | Difference Amount |
|---|---|---|---|---|---|---|---|
| 1 | Cap. Ampicillin 250 mg with dicloxacilline 250mg | 173800 | 5.58 | 969804 | 5.48 | 952424 | 17380 |
| 2 | Cap. Ampicillin 250 mg | 122300 | 2.89 | 353447 | 2.84 | 347332 | 6115 |
| 3 | Tab. Amoxycillin 500mg with clavulanic acid 125 mg | 200000 | 28.35 | 5670000 | 27.41 | 5482000 | 188000 |
| 4 | Cap Amoxycillin 250 mg | 139600 | 2.89 | 403444 | 2.84 | 396464 | 6980 |
| 5 | Tab Amoxycillin 125 mg | 118000 | 2.36 | 278480 | 2.27 | 267860 | 10620 |
| 6 | Tab. Antacid | 172400 | 0.66 | 113784 | 0.65 | 112060 | 1724 |
| 7 | Tab. Aspirin 75 mg | 38000 | 0.26 | 9880 | 0.25 | 9500 | 380 |
| 8 | Tab. Albendazole 400 mg | 113500 | 12.29 | 1394915 | 11.34 | 1287090 | 107825 |
| 9 | Tab. Atenolol 50 mg | 949000 | 1.35 | 1281150 | 1.32 | 1252680 | 28470 |
| 10 | Tab. Amoldepine 5 mg with Atenolol 50 mg | 90500 | 1.58 | 142990 | 1.51 | 136655 | 6335 |
| 11 | Tab. Methyl dopa 250 mg | 2500 | 4.25 | 10625 | 4.2 | 10500 | 125 |
| 12 | Tab. Ibuprofen 400 mg with paracetamol 325 mg | 310700 | 0.74 | 229918 | 0.72 | 223704 | 6214 |
| 13 | Tab. Vitamin B. Complex | 389300 | 0.5 | 194650 | 0.47 | 182971 | 11679 |
| 14 | Tab. Bisacodyly 5 mg | 5000 | 5.36 | 26800 | 5.15 | 25750 | 1050 |
| 15 | Tab. Ciprofloxacin 500 mg | 268000 | 4.73 | 1267640 | 4.63 | 1240840 | 26800 |
| 16 | Tab. Calcium 500 mg with Vit D3 | 745000 | 3.05 | 2272250 | 2.84 | 2115800 | 156450 |
| 17 | Tab. Chlropheramine Maleate 4 mg (CPM) | 244700 | 0.35 | 85645 | 0.32 | 78304 | 7341 |
| 18 | Tab. Cotrimazole Vaginal 100 mg | 43400 | 6.14 | 266476 | 6.09 | 264306 | 2170 |
| 19 | Tab. Cetrizine 10 mg | 153500 | 2.17 | 333095 | 2.08 | 319280 | 13815 |
| 20 | Tab. Sulphamethazole 400 mg with Trimethoprim 80 mg (SS) | 130500 | 0.63 | 82215 | 0.61 | 79605 | 2610 |
| 21 | Tab. Sulphamethazole 800 mg with Trimthoprime 160 mg (DS) | 181500 | 1.23 | 223245 | 1.21 | 219615 | 3630 |
| 22 | Tab. Cefixime 200 mg | 56000 | 22.68 | 1270080 | 21.74 | 1217440 | 52640 |
| 23 | Tab. Theophylline 77 mg with ethophylline 23 mg | 70000 | 0.26 | 18200 | 0.24 | 16800 | 1400 |
| 24 | Tab. Dicyclomine 10 mg | 117500 | 1.32 | 155100 | 1.31 | 153925 | 1175 |
| 25 | Tab. Diclofenac 50 mg with paracetamol 500 mg | 315000 | 1.47 | 463050 | 1.42 | 447300 | 15750 |
| 26 | Cap. Doxycycline 100 mg | 55000 | 0.89 | 48950 | 0.87 | 47850 | 1100 |
| 27 | Tab. Diazepam 5 mg | 16500 | 1.52 | 25080 | 1.51 | 24915 | 165 |

ಅಧ್ಯಕ್ಷರು
ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಬೆಂಗಳೂರು

| | | | | | | | |
|---|---|---|---|---|---|---|---|
| 28 | Tab. Diclofenac Suppository 100 mg Adult | 10000 | 8.51 | 85100 | 8.4 | 84000 | 1100 |
| 29 | Tab. Erythromycin 250 mg | 11000 | 3.15 | 34650 | 3.15 | 34650 | 0 |
| **30** | **Tab. Ferrous Sulphate 200 mg** | **3500000** | **0.89** | **3115000** | **0.85** | **2975000** | **140000** |
| 31 | Tab. Flucanazole 150 mg | 30000 | 28.35 | 850500 | 27.41 | 822300 | 28200 |
| **32** | **Tab. Diclofenac Suppository 25 mg paed.** | **5000** | **5.88** | **29400** | **5.78** | **28900** | **500** |
| 33 | Tab. Gliclazide 80 mg | 24000 | 3.68 | 88320 | 3.59 | 86160 | 2160 |
| 34 | Tab. Glybenclamide 5 mg | 67000 | 0.85 | 56950 | 0.83 | 55610 | 1340 |
| 35 | Tab. Metronidazole 400 mg | 22300 | 0.8 | 17840 | 0.79 | 17617 | 223 |
| 36 | Tab. Multivitamin | 226800 | 6.09 | 1381212 | 5.67 | 1285956 | 95256 |
| 37 | Tab. Metformin 500 mg | 103700 | 1.1 | 114070 | 1.05 | 108885 | 5185 |
| 38 | Tab. Norfloxacine 400 mg | 17500 | 2.17 | 37975 | 2.1 | 36750 | 1225 |
| 39 | Tab. Paracetamol 500 mg | 600000 | 0.66 | 396000 | 0.63 | 378000 | 18000 |
| 40 | Tab. Ranitidine 150 mg | 104000 | 0.48 | 49920 | 0.47 | 48880 | 1040 |
| 41 | Tab. Salbutamol 4 mg | 25000 | 0.85 | 21250 | 0.84 | 21000 | 250 |
| 42 | Cap. Tetracycline 500 mg | 50000 | 2.15 | 107500 | 2.1 | 105000 | 2500 |
| **43** | **Tab. Vitamin C 100 mg** | **12000** | **1.1** | **13200** | **1.05** | **12600** | **600** |
| 44 | Tab. Methylergometrine 125 mcg | 75000 | 6.2 | 465000 | 6.09 | 456750 | 8250 |
| 45 | Cought Syrup (bronchodilator+Mucolytic) 100ml, Each 5mg contains Terbutaline sulphate IP 1.25mg, Guaiphenesin IP 50mg, Bromhexine HCl IP 2mg | 12500 | 28.88 | 361000 | 28.35 | 354375 | 6625 |
| 46 | Calcium Syrup 250 mg/5ml 150ml | 12500 | 45.36 | 567000 | 44.42 | 555250 | 11750 |
| 47 | Cotrimazole Syrup each 5ml contains trimethoprim 40mg with sulphamethoxazole 200mg 60ml bottle | 15000 | 21.74 | 326100 | 21 | 315000 | 11100 |
| 48 | Syp Erythromycin each 5ml contains erythromycin oral suspension 125mg/5ml 60ml bottle | 12500 | 25.52 | 319000 | 25.2 | 315000 | 4000 |
| 49 | Syp Ofloxacin 50mg/5ml 30ml | 5000 | 29.19 | 145950 | 28.35 | 141750 | 4200 |
| 50 | Syrup Paracetamol 250mg/5ml 60ml | 12500 | 18.11 | 226375 | 17.85 | 223125 | 3250 |
| **51** | **Inj. Propofol 1% 20ml AMP MCT/LCT with olic acid** | **200** | **254.1** | **50820** | **252** | **50400** | **520** |
| | | | **Total** | **26451045** | | **25425928** | **1025117** |

ಮೇಲಿನ ದರಪಟ್ಟಿಯನ್ವಯ **ಮೆ॥ ಅನೂಜ್‌ಫಾರ್ಮರವರು** ಎಲ್ಲಾ ಅವಶ್ಯವಿರುವ 51 ಔಷಧಿಗಳಿಗೆ ಒಟ್ಟಾರೆ **ರೂ.2,54,25,928=00 ಗಳ ತೆರಿಗೆ L1** ದರ ನಮೂದಿಸಿದ್ದು, **ಮೆ॥ ಮೆರಿಲ್ ಫಾರ್ಮಸ್ಯೂಟಿಕಲ್** ಕಂ. ರವರು ಸಹ 51 ಔಷಧಿಗಳಿಗೆ **ರೂ.2,64,51,045=00 ಗಳ L2** ದರ ನಮೂದಿಸಿರುತ್ತಾರೆ. ಅಂದರೆ ಮೆ॥ ಅನೂಜ್ ಫಾರ್ಮಾರವರು

ಅಧ್ಯಕ್ಷರು
ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಬೆಂಗಳೂರು

ಮೆ॥ ಮೆರಿಲ್ ಫಾರ್ಮಸ್ಯೂಟಿಕಲ್ ಕಂ. ರವರಿಗಿಂತ **ರೂ.10,25,117=00** ಗಳ ಕಡಿಮೆ ದರ ನಮೂದಿಸಿ **L1** ದರ ಹೊಂದಿದ್ದು, ಆರ್ಥಿಕ ಬಿಡ್‌ನಲ್ಲಿ ಆಯ್ಕೆಯಾಗಿರುತ್ತಾರೆ.

ಮೆ॥ ಅನೂಜ್ ಫಾರ್ಮಾ ರವರಿಂದ ಖರೀದಿಸುವ ಸಂಬಂಧ ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿಯ ತೀರ್ಮಾನಕ್ಕಾಗಿ ಕಡತವನ್ನು ಸಲ್ಲಿಸುವ ಸಂದರ್ಭದಲ್ಲಿ ತಿರಸ್ಕೃತ ಬಿಡ್ಡುದಾರರೊಬ್ಬರಾದ **ಶ್ರೀಮತಿ.ಪ್ರೇಮಲತ ಎಂಬುವವರು ಕರ್ನಾಟಕ ಉಚ್ಚ ನ್ಯಾಯಾಲಯದಲ್ಲಿ ರಿಟ್ ಅರ್ಜಿ ಸಂಖ್ಯೆ: 5642/2012 ಮತ್ತು 5644/2012 ರ ರೀತ್ಯ ತಡೆಯಾಜ್ಞೆ ತಂದು** ನಂತರ ಕರ್ನಾಟಕ ಪಾರದರ್ಶಕ ನಿಯಮಾವಳಿ ಸೆಕ್ಷನ್ 16 ರ ರೀತ್ಯ ಸಕ್ಷಮ ಪ್ರಾಧಿಕಾರದಲ್ಲಿ ಮೇಲ್ಮನವಿ ಸಲ್ಲಿಸಲು ಅರ್ಜಿದಾರರಿಗೆ ಅವಕಾಶ ಕಲ್ಪಿಸಲಾಗಿತ್ತು. ತಮ್ಮ ಅವಗಾಹನೆಗೆ ನ್ಯಾಯಾಲಯದ ಆದೇಶವನ್ನು ಕಡತದ ಪುಟ-84 ರಿಂದ 87 ರವರೆಗೆ ಲಗತ್ತಿಸಿದೆ.

ನ್ಯಾಯಾಲಯದ ಆದೇಶದಂತೆ ಅರ್ಜಿದಾರರು ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ನಗರಾಭಿವೃದ್ಧಿ ಇಲಾಖೆಯಲ್ಲಿ ಮೇಲ್ಮನವಿ (ಸಂಖ್ಯೆ: UDD 532/MNY/2012 ಮತ್ತು UDD 533/2012, Dated: 17-08-2012) ಸಲ್ಲಿಸಿದ್ದು, ಸದರಿಯವರ ಮೇಲ್ಮನವಿ ತಿರಸ್ಕೃತಗೊಂಡು **ಪಾಲಿಕೆಯು ಟೆಂಡರ್ ಮಾಡಿರುವ ಕ್ರಮ ಸರಿ ಇರುವುದಾಗಿ ತೀರ್ಪು ನೀಡಿರುತ್ತದೆ**. ತೀರ್ಪಿನ ಪ್ರತಿಯನ್ನು ಕಡತದಲ್ಲಿ ಪುಟ-121 ರಿಂದ 123 ರಲ್ಲಿ ಲಗತ್ತಿಸಿದೆ.

ಅರ್ಜಿದಾರರ ಮೇಲ್ಮನವಿ ಸರ್ಕಾರದಲ್ಲಿ ತಿರಸ್ಕೃತಗೊಂಡ ನಂತರ ಅರ್ಜಿದಾರರು ಪುನಃ ಕರ್ನಾಟಕ ಉಚ್ಚ ನ್ಯಾಯಾಲಯದಲ್ಲಿ ಮೇಲ್ಮನವಿ ವಿರುದ್ಧ ರಿಟ್ ಅರ್ಜಿ ಸಂಖ್ಯೆ: 39207/2012 ಮತ್ತು W.P.39208/2012 (GM-TEN) ರ ರೀತ್ಯ ಪ್ರಕರಣ ದಾಖಲಿಸಿದ್ದು, ಹಲವು ಬಾರಿ ನ್ಯಾಯಾಲಯದ ಮುಂದೆ ಬಂದಿದ್ದು, ವಾದ-ವಿವಾದಗಳ ನಂತರ ಅರ್ಜಿದಾರರ ರಿಟ್ ಅರ್ಜಿ ತಿರಸ್ಕರಿಸಿ **ಪಾಲಿಕೆಯ ಟೆಂಡರ್ ಕ್ರಮವನ್ನು ಎತ್ತಿ ಹಿಡಿಯಲಾಗಿರುತ್ತದೆ. ನ್ಯಾಯಾಲಯದ ಆದೇಶದ ಪ್ರತಿಯನ್ನು ಕಡತದಲ್ಲಿ ಪುಟ-99 ರಿಂದ 106 ರಲ್ಲಿ ಲಗತ್ತಿಸಿದೆ.**

ಈಗಾಗಲೇ ನ್ಯಾಯಾಲಯದಲ್ಲಿ ಪ್ರಕರಣ ಇತ್ಯರ್ಥವಾಗಿರುವುದರಿಂದ **L1** ಬಿಡ್ಡುದಾರರಿಂದ ಔಷಧಿ ಖರೀದಿಸುವ ಸಂಬಂಧ ಪ್ರಸ್ತಾವನೆಯನ್ನು ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿ ಸಲ್ಲಿಸಬಹುದೇ ಅಥವಾ ಅರ್ಜಿದಾರರು ಪುನಃ ಉಚ್ಚ ನ್ಯಾಯಾಲಯದ ದ್ವಿ-ಸದಸ್ಯ ಪೀಠಕ್ಕೆ ರಿಟ್ ಅಪೀಲು ಸಲ್ಲಿಸಿದ್ದಾರೆಯೇ ಎಂಬ ಬಗ್ಗೆ ತಮ್ಮ ಕಛೇರಿಗೆ ಮಾಹಿತಿ ಲಭ್ಯವಿದೆಯೇ? ಒಂದು ವೇಳೆ ಅರ್ಜಿದಾರರು ದ್ವಿ-ಸದಸ್ಯ ಪೀಠಕ್ಕೆ ಅರ್ಜಿ ಸಲ್ಲಿಸಿದ್ದರೂ ಸಹ ಮೇಲಿನ ನ್ಯಾಯಾಲಯದ ಏಕ ಸದಸ್ಯ ಪೀಠದ ಆದೇಶದಂತೆ ಮುಂದಿನ ಖರೀದಿ ಪ್ರಕ್ರಿಯೆ ಕೈಗೊಳ್ಳಬಹುದೇ ಎಂಬ ಬಗ್ಗೆ ಕಾನೂನು ಕೋಶದ ಅಭಿಪ್ರಾಯ ಕೋರಲಾಗಿತ್ತು.

ಕಾನೂನು ಕೋಶದ ಅಭಿಪ್ರಾಯವನ್ನು ಕಡತದ ಪುಟ-108 ರಲ್ಲಿ ಲಗತ್ತಿಸಿದೆ. (ಸಂಖ್ಯೆ: ಬಿಬಿಎಂಪಿ/ಎಲ್‌ಸಿ/ಆರ್‌ಆರ್/1952/2012-13, ದಿನಾಂಕ: 10-12-2012) ಮೇಲ್ಮನವಿಯ ಬಗ್ಗೆ ಯಾವುದೇ ತಡೆಯಾಜ್ಞೆ ಇರುವುದಿಲ್ಲವಾದ್ದರಿಂದ ಮುಂದೆ ನ್ಯಾಯಾಲಯ ನೀಡುವ ತಾತ್ಕಾಲಿಕ/ಅಂತಿಮ ಆದೇಶದ ಷರತ್ತಿಗೊಳಪಡಿಸಿ ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿಯ ತೀರ್ಮಾನಕ್ಕಾಗಿ ಕಡತ ಸಲ್ಲಿಸಬಹುದೆಂದು ಅಭಿಪ್ರಾಯ ನೀಡಲಾಗಿರುತ್ತದೆ.

ಮೇಲ್ಕಂಡಂತೆ ಆರ್ಥಿಕ ಬಿಡ್ಡಿನಲ್ಲಿ **L1** ಬಿಡ್ಡುದಾರರಾಗಿ ಆಯ್ಕೆಯಾದ ಮೆ॥ ಅನೂಜ್ ಫಾರ್ಮಾ ರವರು ದಿನಾಂಕ: 15-02-2012 ರಂದು ಮುಖ್ಯ ಆರೋಗ್ಯಾಧಿಕಾರಿಗಳಿಗೆ ಪತ್ರ ಸಲ್ಲಿಸಿ ತಾವು ಪಾಲಿಕೆಯ ಟೆಂಡರ್ ನಲ್ಲಿ **L1 ಬಿಡ್ಡುದಾರರಾಗಿ ಆಯ್ಕೆಯಾಗಿರುವುದರಿಂದ** ಸಂತೋಷವಾಗಿದ್ದು, ತಾವು ನಮೂದಿಸಿರುವ ಒಟ್ಟು ದರದಲ್ಲಿ ಶೇ.2% ರಷ್ಟು ದರವನ್ನು ಕಡಿಮೆ ಮಾಡುವುದಾಗಿ ತಿಳಿಸಿರುತ್ತಾರೆ. ಆದ್ದರಿಂದ ಕಾನೂನು ಕೋಶದ ಅಭಿಪ್ರಾಯದಂತೆ ಮೇಲ್ಮನವಿಯ ಬಗ್ಗೆ

S. Venkatesh Babu
ಅಧ್ಯಕ್ಷರು
ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಬೆಂಗಳೂರು

ಯಾವುದೇ ತಡೆಯಾಜ್ಞೆ ಇಲ್ಲದಿರುವುದರಿಂದ ಮುಂದೆ ನ್ಯಾಯಾಲಯ ನೀಡುವ ತಾತ್ಕಾಲಿಕ/ಅಂತಿಮ ಆದೇಶ ನೀಡುವ ಷರತ್ತುಗೊಳಪಡಿಸಿ ಸದರಿಯವರು ನಮೂದಿಸಿರುವ **L1 ದರದಲ್ಲಿ** ಶೇ.2% ರಷ್ಟು ಕಡಿಮೆ ಮಾಡಿ (**2,54,25,928-5,08,519=2,49,17,409**) ಒಟ್ಟು **ರೂ.2,49,17,409** ಮೊತ್ತದಲ್ಲಿ 2012-13 ನೇ ಸಾಲಿನ ಆಯವ್ಯಯದ ಲೆಕ್ಕಶೀರ್ಷಿಕೆ 14 ಆರೋಗ್ಯ ವೈದ್ಯಕೀಯ ಔಷಧಿ ಖರೀದಿಗಾಗಿ **P0093** ರಲ್ಲಿ ಮೀಸಲಿಟ್ಟಿರುವ ಮೊತ್ತದಲ್ಲಿ ಈ ಖರ್ಚನ್ನು ಭರಿಸಿ **L1** ಬಿಡ್ಡುದಾರರಿಂದ ಔಷಧಿ ಖರೀದಿಸುವ ಸಂಬಂಧ ಸೂಕ್ತ ತೀರ್ಮಾನಕ್ಕಾಗಿ ವಿಷಯವನ್ನು ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿ ಮುಂದೆ ಅನುಮೋದನೆ ಕೋರಿ ಮಂಡಿಸಿದೆ.

**ನಿರ್ಣಯ:**

**ಮಾನ್ಯ ಆಯುಕ್ತರ ದಿನಾಂಕ: 26-12-2012 ರ ಟಿಪ್ಪಣಿಯನ್ನು ಒಪ್ಪಲು ಸಮಿತಿಯು ತೀರ್ಮಾನಿಸಿತು.**

S. Venkatesh Babu

**(ಎಸ್.ವೆಂಕಟೇಶ್ ಬಾಬು)**
**ಅಧ್ಯಕ್ಷರು**
**ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿ**
**ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ.**

# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿಯ ದಿನಾಂಕ: 24-01-2013 ರಂದು ನಡೆದ ಸಭೆಯ ನಡವಳಿಗಳು.

| ಹಾಜರಿದ್ದ ಸದಸ್ಯರು | | ಹಾಜರಿದ್ದ ಅಧಿಕಾರಿಗಳು |
|---|---|---|
| **ಶ್ರೀಯುತರುಗಳಾದ:** | | |
| ಶ್ರೀ.ಎಸ್.ವೆಂಕಟೇಶ್ ಬಾಬು | ಅಧ್ಯಕ್ಷರು | ಕೌನ್ಸಿಲ್ ಕಾರ್ಯದರ್ಶಿ |
| ಡಾ॥ ಎಂ.ಎಸ್.ಶಿವಪ್ರಸಾದ್ | ಸದಸ್ಯರು | ಕಾರ್ಯಪಾಲಕ ಅಭಿಯಂತರರು (ಘ.ತ್ಯಾ.ನಿ.-1) |
| ಶ್ರೀ.ಅನಿಲ್ ಕುಮಾರ್ ಎಸ್. | ಸದಸ್ಯರು | ಸಹಾಯಕ ಅಭಿಯಂತರರು (ವಾರ್ಡ್ ನಂ.198) |
| ಶ್ರೀ.ಜಿ.ಮಂಜುನಾಥ್ | ಸದಸ್ಯರು | |
| ಶ್ರೀ.ಎಂ.ಇ.ಪಿಳ್ಳಪ್ಪ | ಸದಸ್ಯರು | |
| ಶ್ರೀಮತಿ.ರೂಪಾದೇವಿ | ಸದಸ್ಯರು | |
| ಶ್ರೀಮತಿ.ಶ್ರೀವಿದ್ಯಾ ಎನ್. | ಸದಸ್ಯರು | |
| ಶ್ರೀಮತಿ.ದೇವಿಕಾ ರಾಣಿ ಶ್ರೀಧರ್ | ಸದಸ್ಯರು | |
| ಶ್ರೀಮತಿ.ಫೌಜಿಯ ಬೇಗಂ | ಸದಸ್ಯರು | |
| ಶ್ರೀ.ಸಿ.ಎಸ್.ರಾಧಾಕೃಷ್ಣ | ಸದಸ್ಯರು | |

(ಹಿಂದಿನ ಸಭೆಯ ನಡವಳಿಗಳನ್ನು ಓದಿ ದಾಖಲು ಮಾಡಿಕೊಳ್ಳಲಾಯಿತು)

1. **ವಿಷಯದ ಸಂಖ್ಯೆ: ಸಾಆಸ್ಥಾಸ/15/2012-13:**

ವಿಶೇಷ ಆಯುಕ್ತರು (ಯೋಜನೆ) ರವರ ದಿನಾಂಕ: 31-12-2012 ರ ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಬೆಂಗಳೂರು ನಗರ ಜಿಲ್ಲೆ ಆನೇಕಲ್ ತಾಲ್ಲೂಕ್ ಜಿಗಣಿ ಹೋಬಳಿ, ಎಸ್.ಬಿಂಗಿಪುರ ಗ್ರಾಮದ ಸರ್ವೆ ನಂ.179 ರಲ್ಲಿ 20.06 ಎಕರೆ ವಿಸ್ತೀರ್ಣದ ಜಮೀನನ್ನು, ಬೆಂಗಳೂರು ನಗರ ಜಿಲ್ಲಾಧಿಕಾರಿಗಳ ಕಛೇರಿ ಆದೇಶದ ಸಂಖ್ಯೆ: ಎಸ್.ಡಿ.(ಎ).ಸಿ.ಆರ್./122/02-03, ದಿನಾಂಕ: 13-09-2005ರ ನಗರ ಸಭೆ ಬೊಮ್ಮನಹಳ್ಳಿಗೆ ಘನತ್ಯಾಜ್ಯ ವಸ್ತುಗಳ ವಿಲೇವಾರಿಗಾಗಿ ಮಂಜೂರು ಮಾಡಲಾಗಿದ್ದು, ಈಗ ಬೊಮ್ಮನಹಳ್ಳಿ ನಗರ ಸಭೆಯು ಬಿ.ಬಿ.ಎಂ.ಪಿ. ವ್ಯಾಪ್ತಿಗೆ ಸೇರಿರುವುದರಿಂದ, ಈ ಪ್ರದೇಶವನ್ನು ಘನತ್ಯಾಜ್ಯ ವಿಭಾಗದಿಂದ ವಿಲೇವಾರಿಗೆ ಮತ್ತು ನೆಲಭರ್ತಿ ಜಾಗಕ್ಕೆ ಅಗತ್ಯ ಕ್ರಮ ವಹಿಸಲು ಹಸ್ತಾಂತರಿಸಲಾಗಿದ್ದು, ಸದರಿ ಪ್ರದೇಶವನ್ನು ಡಂಪಿಂಗ್ ಯಾರ್ಡಾಗಿ ನಿರ್ವಹಿಸಬೇಕೆಂದು ಮಾನ್ಯ ಆಯುಕ್ತರು ಸೂಚಿಸಿದ್ದ ಮೇರೆಗೆ, ಸದರಿ ಜಾಗವನ್ನು ಪರಿಶೀಲಿಸಲಾಗಿ, ಜಾಗವು ಕಲ್ಲುಗಣಿಗಳಿಂದ ಕೂಡಿದ್ದರಿಂದ, ಸದರಿ ಸ್ಥಳವನ್ನು ಅನುಪಯುಕ್ತ ಹಾಗೂ Silt ಭರ್ತಿ ಮಾಡಲು ಸೂಕ್ತವಾದ ಸ್ಥಳವಾದ್ದರಿಂದ ದಕ್ಷಿಣ ವಲಯ ಹಾಗೂ ಸುತ್ತಮುತ್ತಲಿನ ಪ್ರದೇಶಗಳಿಂದ ಬರುವ ಅನುಪಯುಕ್ತ/Silt ಅನ್ನು ತುಂಬಲು ಅನುಕೂಲವಾಗುತ್ತದೆ. ಆದ್ದರಿಂದ ಆಯುಕ್ತರೊಂದಿಗೆ ಚರ್ಚಿಸಿ Dumping Yard ಮಾಡಲು ನಿರ್ಣಯಿಸಲಾಗಿರುತ್ತದೆ.

ಸದರಿ ಸ್ಥಳವನ್ನು ಪರಿಶೀಲನೆ ಮಾಡಲಾಗಿ ಈಗಾಗಲೇ ನಿರ್ಮಿಸಲಾದ ಕಾಂಪೌಂಡ್ ಗೋಡೆಯನ್ನು ಸ್ಥಳೀಯ ದುಷ್ಕರ್ಮಿಗಳು ಹಾಳು ಮಾಡಿರುತ್ತಾರೆ. ತತ್ಸಬಂಧವಾಗಿ ಹಲವಾರು ಕಡೆ ಕಾಂಪೌಂಡ್ ಮತ್ತು ಅಡಿಪಾಯವನ್ನು ಅಲ್ಲಲ್ಲಿ ಹಾಳು ಮಾಡಿರುವುದು ಸ್ಥಳ ಪರೀವಿಕ್ಷಣೆ ಸಮಯದಲ್ಲಿ ಕಂಡು ಬಂದಿರುತ್ತದೆ.

ಅಧ್ಯಕ್ಷರು
ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಬೆಂಗಳೂರು

ಮಾನ್ಯ ಆಯುಕ್ತರು ಮತ್ತು ಅಪರ ಆಯುಕ್ತರು (ಯೋಜನೆ) ರವರು ಕ್ರಮವಾಗಿ ಕಂಡಿಕೆ (42) ಮತ್ತು (43) ರಲ್ಲಿ ಜಾಬ್ ಸಂಖ್ಯೆ ನೀಡಲು ಅನುಮತಿ ನೀಡಿರುತ್ತಾರೆ. ಅದರಂತೆ ರೂ.66.98 ಲಕ್ಷಗಳಿಗೆ ಜಾಬ್ ಸಂಖ್ಯೆ ನೀಡಲಾಗಿದ್ದು, ಜಾಬ್ ಸಂಖ್ಯೆ: 310-12-000008 ಆಗಿರುತ್ತದೆ. ಈಗಾಗಲೇ ರೂ.66.98 ಲಕ್ಷಗಳಿಗೆ ಪಿ.ಡಬ್ಲ್ಯೂ.ಡಿ. ಇಲಾಖೆಯ ದರಪಟ್ಟಿಯ ದರಗಳನ್ವಯ ಅವಶ್ಯವಿರುವ ಅಂಶಗಳನ್ನು ಅಳವಡಿಸಿಕೊಂಡು ಅಂದಾಜು ಪಟ್ಟಿಯನ್ನು ತಯಾರಿಸಲಾಗಿದೆ.

ಸದರಿ ಕಾಮಗಾರಿಯನ್ನು 2012-13ನೇ ಸಾಲಿನ 13ನೇ ಹಣಕಾಸು ಯೋಜನೆಯಡಿಯಲ್ಲಿ ರೂ.66.98 ಲಕ್ಷಗಳಿಗೆ ಜಾಬ್ ಸಂಖ್ಯೆ ನೀಡಲಾಗಿರುತ್ತದೆ. ಈ ಕಾಮಗಾರಿಯನ್ನು ತುರ್ತಾಗಿ ನಿರ್ವಹಿಸಬೇಕಾಗಿರುವುದರಿಂದ ಕೆ.ಆರ್.ಐ.ಡಿ.ಎಲ್. ಸಂಸ್ಥೆಯಿಂದ ನಿರ್ವಹಿಸಲು ಅನುಮೋದನೆ ಹಾಗೂ ಮುಖ್ಯವಾಗಿ ದಕ್ಷಿಣ ವಲಯಕ್ಕೆ ಸಂಬಂಧಿಸಿದ ಗಾಳಿ ಆಂಜನೇಯ ಸ್ವಾಮಿ ದೇವಸ್ಥಾನದ ಹತ್ತಿರ ಇರುವ ಬೃಹತ್ ನೀರುಗಾಲುವೆಯಲ್ಲಿ ಬರುವ Silt ಅನ್ನು ಹಾಕಲು ಸ್ಥಳ ಇಲ್ಲದೆ ಇರುವುದರಿಂದ ಎಸ್.ಬಿಂಗಿಪುರದ 20.06 ಎಕರೆ ವಿಸ್ತೀರ್ಣದ ಪ್ರದೇಶವನ್ನು ಡಂಪಿಂಗ್ ಯಾರ್ಡ್ ಆಗಿ ನಿರ್ವಹಿಸುವುದು ಅವಶ್ಯವಾಗಿರುತ್ತದೆ. ಆದ್ದರಿಂದ ಸದರಿ ಕಾಮಗಾರಿಯನ್ನು ಕೆ.ಆರ್.ಐ.ಡಿ.ಎಲ್. ಸಂಸ್ಥೆಯಿಂದ ನಿರ್ವಹಿಸಲು ಅನುಮೋದನೆ ಕೋರಿ ಸೂಕ್ತ ತೀರ್ಮಾನಕ್ಕಾಗಿ ವಿಷಯವನ್ನು ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿ ಮುಂದೆ ಅನುಮೋದನೆ ಕೋರಿ ಮಂಡಿಸಿದೆ.

**ನಿರ್ಣಯ:**

**ವಿಶೇಷ ಆಯುಕ್ತರು (ಯೋಜನೆ) ರವರ ದಿನಾಂಕ: 31-12-2012ರ ಟಿಪ್ಪಣಿಯನ್ನು ಒಪ್ಪಲು ಸಮಿತಿಯು ತೀರ್ಮಾನಿಸಿತು.**

2. **ವಿಷಯದ ಸಂಖ್ಯೆ: ಸಾಆಸ್ಥಾಸ/80/2012-13:**

ಸಂಖ್ಯೆ: ಮು.ಅ/ಘ.ತ್ಯಾ.ನಿ-1/ಪಿಆರ್/ /2012-13, ದಿನಾಂಕ: 08-01-2013 ರ ಅಪರ ಆಯುಕ್ತರು (ಘನತ್ಯಾಜ್ಯ ನಿರ್ವಹಣೆ) ರವರ ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಮಂಡೂರು ತ್ಯಾಜ್ಯ ವಿಲೇವಾರಿ ಹಾಗೂ ಸಂಸ್ಕರಣಾ ಘಟಕದ ಪ್ರದೇಶವು 135 ಎಕರೆ ವಿಸ್ತೀರ್ಣವಿದ್ದು, 85 ಎಕರೆ ಜಾಗವನ್ನು ಮೆ॥ ಶ್ರೀನಿವಾಸ ಗಾಯಿತ್ರಿ ರಿಸೋರ್ಸ್ ರಿಕವರಿ ಲಿಮಿಟೆಡ್ ರವರಿಗೆ ತ್ಯಾಜ್ಯದಿಂದ ವಿದ್ಯುತ್ ಉತ್ಪಾದನೆ ಯೋಜನೆಗೆ ನೀಡಲಾಗಿರುತ್ತದೆ. ತ್ಯಾಜ್ಯದಿಂದ ವಿದ್ಯುತ್ ಉತ್ಪಾದಿಸುವ ಯೋಜನೆ ತಾಂತ್ರಿಕ ಕಾರಣಗಳಿಂದ ವಿಳಂಬವಾಗಿರುವ ಹಿನ್ನೆಲೆಯಲ್ಲಿ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ ಅನುಮೋದನೆಯೊಂದಿಗೆ ಸದರಿ ಘಟಕದಲ್ಲಿ ತ್ಯಾಜ್ಯದಿಂದ ಗೊಬ್ಬರ ತಯಾರಿಸಲಾಗುತ್ತಿದ್ದು, ಉಳಿಕೆ ತ್ಯಾಜ್ಯವನ್ನು ಲ್ಯಾಂಡ್‌ಫಿಲ್‌ನಲ್ಲಿ ವಿಲೇವಾರಿ ಮಾಡಲಾಗುತ್ತಿದೆ. ಇನ್ನುಳಿದ 50 ಎಕರೆ ಪ್ರದೇಶದಲ್ಲಿ ಪಾಲಿಕೆ ವತಿಯಿಂದ ಲ್ಯಾಂಡ್‌ಫಿಲ್ ನಿರ್ಮಿಸಿ ಘನತ್ಯಾಜ್ಯ ವಿಲೇವಾರಿಯನ್ನು ಮಾಡಲಾಗುತ್ತಿದೆ.

ಸದರಿ ತ್ಯಾಜ್ಯ ಸಂಸ್ಕರಣಾ/ವಿಲೇವಾರಿ ಘಟಕಗಳಲ್ಲಿ ಪ್ರತಿನಿತ್ಯ ಅಂದಾಜು 3500 ಮೆ.ಟನ್ ತ್ಯಾಜ್ಯ ವಿಲೇವಾರಿ ಮಾಡಲಾಗುತ್ತಿದೆ. ಸದರಿ ತ್ಯಾಜ್ಯ ಸಂಸ್ಕರಣಾ/ವಿಲೇವಾರಿ ಘಟಕಗಳಿಗೆ ಸಂಪರ್ಕ ಕಲ್ಪಿಸಲು ಕೂಡು ರಸ್ತೆಯಿದ್ದು, ಸದರಿ ಕೂಡು ರಸ್ತೆಯ ಉದ್ದ ಅಂದಾಜು 2.2 ಕಿ.ಮೀ. ಗಳಿರುತ್ತದೆ. ಈ ರಸ್ತೆಯಲ್ಲಿ ಸುಮಾರು 400 ತ್ಯಾಜ್ಯ ವಿಲೇವಾರಿ ವಾಹನಗಳು ಪ್ರತಿನಿತ್ಯ ಸಂಚರಿಸುತ್ತವೆ. ಸದರಿ ಕೂಡು ರಸ್ತೆಯ ಸುಮಾರು 1.5 ಕಿ.ಮೀ. ಉದ್ದ ರಸ್ತೆಯ ತೀರಾ ಹಾಳಾಗಿ ಗುಂಡಿಗಳು ನಿರ್ಮಾಣವಾಗಿರುತ್ತದೆ.

ಅಧ್ಯಕ್ಷರು
ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಬೆಂಗಳೂರು

ಇದರಿಂದ ತ್ಯಾಜ್ಯ ವಿಲೇವಾರಿ ವಾಹನಗಳು ಸಂಚರಿಸಲು ಬಹಳ ಕಷ್ಟಕರವಾಗಿ ಹಾಗೂ ಸಾರ್ವಜನಿಕ ವಾಹನಗಳ ಓಡಾಟಕ್ಕೆ ಬಹಳ ತೊಂದರೆಯಾಗಿತ್ತು.

ಮಾನ್ಯ ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿ ಅಧ್ಯಕ್ಷರು ಹಾಗೂ ಸದಸ್ಯರು ಸದರಿ ಘಟಕಕ್ಕೆ ಭೇಟಿ ನೀಡಿದ ಸಂದರ್ಭದಲ್ಲಿ ಸದರಿ ಕೂಡು ರಸ್ತೆಯನ್ನು ಅಭಿವೃದ್ಧಿಪಡಿಸಲು ಸೂಚಿಸಿದ್ದರು.

ಈ ಎಲ್ಲಾ ಅಂಶಗಳ ಹಿನ್ನೆಲೆಯಲ್ಲಿ ಸದರಿ ಕೂಡು ರಸ್ತೆಯನ್ನು ಅಭಿವೃದ್ಧಿಪಡಿಸಬೇಕಾದ ಅವಶ್ಯಕತೆ ಹಿನ್ನಲೆಯಲ್ಲಿ ಲೋಕೋಪಯೋಗಿ ಇಲಾಖೆ ದರಪಟ್ಟಿ 2010-11ನೇ ಸಾಲಿನಂತೆ ಅಂದಾಜು ಪಟ್ಟಿಯನ್ನು ರೂ.58.97 ಲಕ್ಷಗಳಿಗೆ ತಯಾರಿಸಿ, ಆಡಳಿತಾತ್ಮಕ ಅನುಮೋದನೆಗಾಗಿ ಹಾಗೂ ಟೆಂಡರ್ ಆಹ್ವಾನಿಸಲು ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಮುಂದೆ ಟಿಪ್ಪಣಿ ಮಂಡಿಸಿ ವಿಷಯ ಸಂಖ್ಯೆ: ತೆ.ಆ.ಸ್ಥಾ.ಸ./291/11-12, ದಿನಾಂಕ: 26-09-2011 ರಂದು ಅನುಮೋದನೆ ಪಡೆಯಲಾಗಿತ್ತು.

ಆದರೆ ಅನುದಾನದ ಕೊರತೆಯಿಂದಾಗಿ ಸದರಿ ಕಾಮಗಾರಿಯನ್ನು ಕೈಗೊಳ್ಳಲು ಸಾಧ್ಯವಾಗಿರಲಿಲ್ಲ.

ಇತ್ತೀಚೆಗೆ ಮಾವಳ್ಳಿಪುರ ತ್ಯಾಜ್ಯ ಸಂಸ್ಕರಣಾ ಘಟಕವು ಸ್ಥಗಿತಗೊಂಡ ಹಿನ್ನೆಲೆಯಲ್ಲಿ ಮಾವಳ್ಳಿಪುರ ತ್ಯಾಜ್ಯ ಸಂಸ್ಕರಣಾ ಘಟಕದಲ್ಲಿ ವಿಲೇವಾರಿಯಾಗುತ್ತಿದ್ದ ತ್ಯಾಜ್ಯವನ್ನು ಮಂಡೂರು ತ್ಯಾಜ್ಯ ವಿಲೇವಾರಿ ಘಟಕಗಳಲ್ಲಿ ವಿಲೇವಾರಿ ಮಾಡುತ್ತಿರುವುದರಿಂದ ತ್ಯಾಜ್ಯ ವಿಲೇವಾರಿ ವಾಹನಗಳು ಹದಗೆಟ್ಟಿ ರಸ್ತೆಯಲ್ಲಿ ಓಡಾಡುವುದು ಕಷ್ಟಕರವಾಗಿದ್ದು, ದೂಳು ಆವರಿಸಿ ಸಾರ್ವಜನಿಕರ ಓಡಾಟಕ್ಕೆ ತೊಂದರೆಯಾಗಿತ್ತು.

ಆದ ಕಾರಣ ಈ ರಸ್ತೆಯ ಅಭಿವೃದ್ಧಿ ಪಡಿಸಲು ಮಾರ್ಪಾಡು ಅಂದಾಜು ಪಟ್ಟಿಯನ್ನು ರೂ.44.30 ಲಕ್ಷಗಳಿಗೆ ತಯಾರಿಸಲಾಗಿದ್ದು, ಸದರಿ ಕೂಡು ರಸ್ತೆಯನ್ನು ತುರ್ತಾಗಿ ಅಭಿವೃದ್ಧಿಪಡಿಸಬೇಕಾಗಿರುವುದರಿಂದ ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿಯ ಅನುಮೋದನೆ ನಿರೀಕ್ಷಿಸಿ ಸದರಿ ಕಾಮಗಾರಿಯನ್ನು ನೇರವಾಗಿ ಮೆ|| ಕೆ.ಆರ್.ಐ.ಡಿ.ಎಲ್. ಸಂಸ್ಥೆರವರಿಂದ ಕೈಗೊಳ್ಳಲಾಗಿರುತ್ತದೆ. ಸದರಿ ಕ್ರಮವನ್ನು ಸ್ಥಿರೀಕರಿಸಲು ಕೋರಿ ಈ ಮೇಲ್ಕಂಡ ಅಂಶಗಳನ್ನು ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿಯ ಮುಂದೆ ಟಿಪ್ಪಣಿ ಮಂಡಿಸಿದೆ.

1. ಸದರಿ ಕಾಮಗಾರಿಯ ಅಂದಾಜು ಮೊತ್ತ ರೂ.44.30 ಲಕ್ಷಗಳನ್ನು 2012-13ನೇ ಸಾಲಿನ ಆಯವ್ಯಯದ, ಸಂಪರ್ಕ ರಸ್ತೆಗಳು ಲೆಕ್ಕ ಶೀರ್ಷಿಕೆಯಡಿಯಲ್ಲಿ ಮೀಸಲಿರಿಸಿರುವ ಮೊತ್ತದಿಂದ ಭರಿಸಿ ಕಾಮಗಾರಿ ಸಂಕೇತ ನೀಡಲು ಅನುಮೋದನೆ.

2. ಸದರಿ ಕಾಮಗಾರಿಯ ಅಂದಾಜು ಮೊತ್ತ ರೂ.44.30 ಲಕ್ಷಗಳಿಗೆ ಆಡಳಿತಾತ್ಮಕ ಅನುಮೋದನೆ.

3. ಸದರಿ ಕೂಡು ರಸ್ತೆಯನ್ನು ತುರ್ತಾಗಿ ಅಭಿವೃದ್ಧಿ ಪಡಿಸಬೇಕಾಗಿರುವುದರಿಂದ ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿಯ ಅನುಮೋದನೆ ನಿರೀಕ್ಷಿಸಿ, ಸದರಿ ಕಾಮಗಾರಿಯನ್ನು ನೇರವಾಗಿ ಮೆ|| ಕೆ.ಆರ್.ಐ.ಡಿ.ಎಲ್. ಸಂಸ್ಥೆರವರಿಂದ ಕೈಗೊಳ್ಳಲಾಗಿದ್ದು, ಸದರಿ ಕ್ರಮವನ್ನು ಸ್ಥಿರೀಕರಿಸಲು ಕೋರಿದೆ.

ಅಧ್ಯಕ್ಷರು
ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಬೆಂಗಳೂರು

ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿ ಮುಂದೆ ಮಂಡಿಸಲಾಗಿರುವ ಟಿಪ್ಪಣಿ.

**ನಿರ್ಣಯ:**

**ಅಪರ ಆಯುಕ್ತರ ದಿನಾಂಕ: 08-01-2013ರ ಟಿಪ್ಪಣಿಯನ್ನು ಒಪ್ಪಲು ಸಮಿತಿಯು ತೀರ್ಮಾನಿಸಿತು.**

3. **ವಿಷಯದ ಸಂಖ್ಯೆ: ಸಾಆಸ್ಥಾಸ/81/2012-13:**

ವಿಶೇಷ ಆಯುಕ್ತರು ರವರ ದಿನಾಂಕ: 22-01-2013 ರ ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಬೊಮ್ಮನಹಳ್ಳಿ ವಲಯ ವ್ಯಾಪ್ತಿಯ ತಾತ್ಕಾಲಿಕ ಘನತ್ಯಾಜ್ಯ ವಿಲೇವಾರಿ ಮಾಡಲು ಲಕ್ಷ್ಮೀಪುರ ಬಂಡೆ ಪ್ರದೇಶದಲ್ಲಿ ಮಣ್ಣು ಹಾಕಿ ಸಮತಟ್ಟು ಮಾಡುವ ಕಾಮಗಾರಿಗೆ ಅನುಮೋದನೆ ಪಡೆಯಲಾಗಿದ್ದು, ಸಾರ್ವಜನಿಕ ಹಿತದೃಷ್ಟಿಯಿಂದ ಅತಿ ಜರೂರಾಗಿ ನಿರ್ವಹಿಸಬೇಕಾಗಿರುತ್ತದೆ.

| Sl. No. | Name of Work | Estimate Cost in Lakhs |
|---|---|---|
| 1 | Maintenance of scientific sanitary landfill of Municipal solid waste at Laxmipura landfill site of Bannerghatta road | 37.54 |

ಸದರಿ ಕಾಮಗಾರಿಗಳನ್ನು ಕೈಗೊಳ್ಳಲು ಮಾನ್ಯ ಆಯುಕ್ತರು ಅನುಮೋದನೆಯನ್ನು ನೀಡಿ ಸದರಿ ಕಾಮಗಾರಿಗಳು ಅವಶ್ಯಕತೆ ಇರುವುದರಿಂದ ತುರ್ತಾಗಿ ಕೆ.ಆರ್.ಐ.ಡಿ.ಎಲ್. ಸಂಸ್ಥೆಯ ಮುಖೇನ ಜರೂರಾಗಿ ನಿರ್ವಹಿಸಲು ಸೂಚಿಸಿರುತ್ತಾರೆ.

ಈ ಕಾಮಗಾರಿಗಳಿಗೆ 2012-13ನೇ ಸಾಲಿನ ಆಯವ್ಯಯದ "ಪಿ-0968" ಸಾರ್ವಜನಿಕ ಆರೋಗ್ಯ ಕಾಮಗಾರಿಗಳು ಲೆಕ್ಕಶೀರ್ಷಿಕೆಯಡಿಯಲ್ಲಿ ನಿಗದಿಪಡಿಸಿರುವ ಮೊತ್ತದಲ್ಲಿ ಸದರಿ ಕಾಮಗಾರಿಗಳಿಗೆ ಈಗಾಗಲೇ ಜಾಬ್ ಕೋಡ್ ನೀಡಿರುವುದರಿಂದ ಕೆ.ಆರ್.ಐ.ಡಿ.ಎಲ್. ಸಂಸ್ಥೆ ವತಿಯಿಂದ ನಿರ್ವಹಿಸಿ ಸ್ಥಿರೀಕರಣಕ್ಕಾಗಿ ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿ ಮುಂದೆ ಅನುಮೋದನೆಗಾಗಿ ಮಂಡಿಸಲಾಗಿರುವ ಟಿಪ್ಪಣಿ.

**ನಿರ್ಣಯ:**

**ವಿಶೇಷ ಆಯುಕ್ತರು (ಯೋಜನೆ) ರವರ ದಿನಾಂಕ: 22-01-2013 ರ ಟಿಪ್ಪಣಿಯನ್ನು ಒಪ್ಪಲು ಸಮಿತಿಯು ತೀರ್ಮಾನಿಸಿತು.**

4. **ವಿಷಯದ ಸಂಖ್ಯೆ: ಸಾಆಸ್ಥಾಸ/82/2012-13:**

ವಿಶೇಷ ಆಯುಕ್ತರು ರವರ ದಿನಾಂಕ: 22-01-2013 ರ ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಬೊಮ್ಮನಹಳ್ಳಿ ವಲಯ ವ್ಯಾಪ್ತಿಯ ತಾತ್ಕಾಲಿಕ ಘನತ್ಯಾಜ್ಯ ವಿಲೇವಾರಿ ಮಾಡಲು ಲಕ್ಷ್ಮೀಪುರ ಬಂಡೆ

ಅಧ್ಯಕ್ಷರು
ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಬೆಂಗಳೂರು

ಪ್ರದೇಶದಲ್ಲಿ ಕ್ರಿಮಿನಾಶಕಗಳನ್ನು ಸಿಂಪಡಿಸಿ ಅಕ್ಕಪಕ್ಕದ ಹಳ್ಳಿಗಳಿಗೆ ರೋಗರುಜನಗಳು ಹರಡದಂತೆ ಕಾಪಾಡುವ ಕಾಮಗಾರಿಗೆ ಅನುಮೋದನೆ ಪಡೆಯಲಾಗಿದ್ದು, ಸಾರ್ವಜನಿಕ ಹಿತದೃಷ್ಟಿಯಿಂದ ಅತಿ ಜರೂರಾಗಿ ನಿರ್ವಹಿಸಬೇಕಾಗಿರುತ್ತದೆ.

| Sl. No. | Name of Work | Estimate Cost in Lakhs |
|---|---|---|
| 1 | Spraying of Chemicals to control mosquito and flymanace at Laxmipura Landfill site and nearby villages at Bannerghatta road | 8.82 |

ಸದರಿ ಕಾಮಗಾರಿಗಳನ್ನು ಕೈಗೊಳ್ಳಲು ಮಾನ್ಯ ಆಯುಕ್ತರು ಅನುಮೋದನೆಯನ್ನು ನೀಡಿ ಸದರಿ ಕಾಮಗಾರಿಗಳು ಅವಶ್ಯಕತೆ ಇರುವುದರಿಂದ ತುರ್ತಾಗಿ ಕೆ.ಆರ್.ಐ.ಡಿ.ಎಲ್. ಸಂಸ್ಥೆಯ ಮುಖೇನ ಜರೂರಾಗಿ ನಿರ್ವಹಿಸಲು ಸೂಚಿಸಿರುತ್ತಾರೆ.

ಈ ಕಾಮಗಾರಿಗಳಿಗೆ 2012-13ನೇ ಸಾಲಿನ ಆಯವ್ಯಯದ "ಪಿ-0968" ಸಾರ್ವಜನಿಕ ಆರೋಗ್ಯ ಕಾಮಗಾರಿಗಳು ಲೆಕ್ಕಶೀರ್ಷಿಕೆಯಡಿಯಲ್ಲಿ ನಿಗದಿಪಡಿಸಿರುವ ಮೊತ್ತದಲ್ಲಿ ಸದರಿ ಕಾಮಗಾರಿಗಳಿಗೆ ಈಗಾಗಲೇ ಜಾಬ್ ಕೋಡ್ ನೀಡಿರುವುದರಿಂದ ಕೆ.ಆರ್.ಐ.ಡಿ.ಎಲ್. ಸಂಸ್ಥೆ ವತಿಯಿಂದ ನಿರ್ವಹಿಸಿ ಸ್ಥಿರೀಕರಣಕ್ಕಾಗಿ ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿ ಮುಂದೆ ಅನುಮೋದನೆಗಾಗಿ ಮಂಡಿಸಲಾಗಿರುವ ಟಿಪ್ಪಣಿ.

## ನಿರ್ಣಯ:

**ವಿಶೇಷ ಆಯುಕ್ತರು (ಯೋಜನೆ) ರವರ ದಿನಾಂಕ: 22-01-2013 ರ ಟಿಪ್ಪಣಿಯನ್ನು ಒಪ್ಪಲು ಸಮಿತಿಯು ತೀರ್ಮಾನಿಸಿತು.**

S. Venkatesh Babu

**(ಎಸ್.ವೆಂಕಟೇಶ್ ಬಾಬು)**
**ಅಧ್ಯಕ್ಷರು**
**ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿ**
**ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ.**